**ಶ್ರೀ ವೈಕುಂಠ ವಾರ್ತಾ**

**ಆಧ್ಯಾತ್ಮಿಕ– ಶೈಕ್ಷಣಿಕ–ಮಾಸ ಪತ್ರಿಕೆ**

ಸಂಪುಟ : 20 | ಸಂಚಿಕೆ : 11
ಮಂಡ್ಯ | ಆಗಸ್ಟ್ 2021
ಪುಟಗಳು : 20

**ಗೌರವ ಸಂಪಾದಕರು :**
**ಕೆ. ಎನ್. ರವಿ**

**ಪ್ರಕಾಶಕರು ಮತ್ತು ಸಂಪಾದಕರು :**
**ಶಿವಮೂರ್ತಿ ಕೀಲಾರ**
**ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್**

**ಮುದ್ರಕರು :**
**ಶಿವಪ್ರಕಾಶ್, ಐಡಿಯಲ್ ಆಫ್‌ಸೆಟ್ ಪ್ರಿಂಟರ್ಸ್**
**ಮಂಡ್ಯ**

**ವಾರ್ಷಿಕ ಚಂದಾ ವಿವರ: 150 ರೂಪಾಯಿಗಳು**

**ವಿಳಾಸ**
**ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್**
**5ನೇ ಕ್ರಾಸ್, ಶಂಕರನಗರ, ಮಂಡ್ಯ**

## –: ಪ ರಿ ವಿ ಡಿ :–

| ಲೇಖನಗಳು | ಪುಟ ಸಂಖ್ಯೆ |
|---|---|
| ಸಂಪಾದಕೀಯ | 1 |
| ಮಂಡ್ಯ ಜಿಲ್ಲೆಯ ಆರ್ಥಿಕ ಪ್ರಗತಿಗೆ ಮುನ್ನುಡಿ ಬರೆದ "ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ" ನಾ ಕಂಡಂತೆ... | 2 |
| ಅಹಂ ಬ್ರಹ್ಮಾಸ್ಮಿ | 3 |
| ನ್ಯೂಟೋನಿಯಂ ಟೆಲಿಸ್ಕೋಪ್‌ನಿಂದ ಆಕಾಶವೀಕ್ಷಣೆ | 5 |
| 2020–21 ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ | 7 |
| ಸಂಪ್ರದಾಯದ ಮೂಲ ನೆಲೆ | 9 |
| ವಿಜ್ಞಾನ ಮತ್ತು ಆಧ್ಯಾತ್ಮದ ನಡುವಿನ ಸಾಮ್ಯತೆ | 10 |
| ಮೂಢನಂಬಿಕೆಯಲ್ಲ ಈ ಹಿಂದೂ ಆಚರಣೆಗಳು, ಇದರ ಬೆನ್ನಿಗಿದೆ ವಿಜ್ಞಾನ! | 12 |
| ಕ್ಯಾರಲಿ : ಸೋಲು ಒಪ್ಪದ ಯೋಧ | 15 |
| ಅಹಂಕಾರದ ಬಗ್ಗೆ ಶ್ರೀ ಶಂಕರಾಚಾರ್ಯರ ನೀತಿ ಪಾಠ | 16 |

# ಸಂಪಾದಕೀಯ

ಶಿಕ್ಷಣವೂ ಕೂಡ ಆಧ್ಯಾತ್ಮದ ಒಂದು ಭಾಗ, ಹಣಬಲ, ಅಧಿಕಾರದ ಬಲಕ್ಕಿಂತ ಜ್ಞಾನಬಲ ಅತ್ಯಂತ ಶಕ್ತಿಯುತವದ ಆಯುಧ, ಕಳೆದ 18 ತಿಂಗಳಿಂದ ಕರೋನಾ ಆವಳಿಗೆ ತುತ್ತಾದ ಭಾರತ ಎಲ್ಲ ಸ್ತರಗಳ ವ್ಯವಸ್ಥೆಯಿಂದ ಕುಸಿದು ಹೋಗಿತ್ತು. ಮುಖ್ಯವಾಗಿ ಶೈಕ್ಷಣಿಕ ವ್ಯವಸ್ಥೆಯು ಅಧಃಪತನಕ್ಕೆ ಇಳಿದಿತ್ತು.ಕರೋನಾ ಈಗ ಸ್ವಲ್ಪ ಬಿಡುವು ಕೊಟ್ಟಿದೆ.3ನೇ ಅಲೆಯ ಆತಂಕದಲ್ಲಿ ಶಾಲಾ ಕಾಲೇಜುಗಳು ಆರಂಭವಾಗಿದೆ.ಶೈಕ್ಷಣಿಕ ವರ್ಷವನ್ನು ಅತ್ಯಂತ ಶಕ್ತಿಯುತವಾಗಿ ಬಳಕೆ ಮಾಡಿಕೊಳ್ಳಲು ಸರ್ಕಾರ ಮತ್ತು ಶಿಕ್ಷಕವರ್ಗ ಶ್ರಮಿಸುತ್ತಿದೆ.

ವಿದ್ಯಾರ್ಥಿಗಳು, ಆನ್‌ಲೈನ್ ಕ್ಲಾಸ್‌ನಲ್ಲಿ ರೋಸಿಹೋಗಿದ್ದರು. ಈಗ ತರಗತಿಗಳು ಆರಂಭವಾಗಿದೆ. ಶೈಕ್ಷಣಿಕ, ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಶಾಲೆಯು ಒಂದು ಮಾಧ್ಯಮವಾಗಿದೆ.

ಶಾಲಾ–ಕಾಲೇಜುಗಳು ಆರಂಭವಾಗಿದ್ದು ವಿದ್ಯಾರ್ಥಿಗಳಿಗೆ ಕಲಿಕೆಗೆ ಆಸಕ್ತಿ ಬೆಳೆಸಲು ಶಾಲೆಗಳು ಪೂರಕವಾಗಿರುವುದು ಪೋಷಕರಿಗೂ ಸಹ ಕೊಂಚ ನೆಮ್ಮದಿ ತರುತ್ತಿದೆ.ಮಕ್ಕಳಲ್ಲಿ ಉತ್ಸಾಹವಿದೆ. ವಿದ್ಯಾರ್ಥಿಗಳ ಕಲಿಕೆಗೆ ಹೊಸತನದಲ್ಲಿ ಕಲಿಸುವುದನ್ನು ರೂಢಿಸಿಕೊಳ್ಳಲು ಮುಂದಾಗಿರುವುದನ್ನು ಶಿಕ್ಷಕರಲ್ಲಿಯೂ ಸಹ ಕಾಣಬಹುದು.

9 ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಲ್ಲಿ ಭೌತಿಕವಾಗಿ ಪಾಠ ಪ್ರವಚನ ಕೇಳಲು ಅವಕಾಶ ಮಾಡಿಕೊಡಲಾಗಿದೆ. 1–7 ನೇತರಗತಿ ಮಕ್ಕಳು ತಮ್ಮ ಶಾಲೆಗಳಲ್ಲಿ ಪಾಠ ಪ್ರವಚನಗಳು ಆರಂಭವಾಗುತ್ತದೆ ಎಂಬುದನ್ನು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಸರ್ಕಾರ ಕೂಡ 2ನೇ ಹಂತದಲ್ಲಿ 1 & 8ನೇ ತರಗತಿ ವಿದ್ಯಾರ್ಥಿಗಳಿಗೆ ಶಾಲೆಗಳನ್ನು ಆರಂಭಿಸುವ ಬಗ್ಗೆ ಸೂಕ್ತ ಮಾರ್ಗದರ್ಶಿ ಸೂತ್ರ ಹಾಗೂ ಲಸಿಕೆಗಳನ್ನು ಹಾಕಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗುಳ್ಳುವ ಸಾಧ್ಯತೆ ಇದೆ.

ಒಟ್ಟಾರೆ ಕರೋನಾ ಹಾವಳಿಯಿಂದ ತತ್ತರಿಸಿದ್ದ ಶೈಕ್ಷಣಿಕ ವ್ಯವಸ್ಥೆ ಈಗ ಅಮೂಲಾಘ್ರವಾಗಿ ಬದಲಾಗಿದೆ. ಅಲ್ಲದೆ ಈ ವರ್ಷದಿಂದ ಹೊಸ ಶಿಕ್ಷಣ ನೀತಿ ಜಾರಿಯಾಗಿದೆ. ಇದರಿಂದಾಗಿ ಮಕ್ಕಳಲ್ಲಿ ಕಲಿಯುವ ಹಾಗೂ ಶಿಕ್ಷಕರಲ್ಲಿ ಕಲಿಸುವ ಆಸಕ್ತಿ ಸಹಜವಾಗಿ ಹಿಮ್ಮಡಿಯಾಗಲಿದೆ.

★

# ಮಂಡ್ಯ ಜಿಲ್ಲೆಯ ಆರ್ಥಿಕ ಪ್ರಗತಿಗೆ ಮುನ್ನುಡಿ ಬರೆದ "ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ" ನಾ ಕಂಡಂತೆ...

ಮಂಡ್ಯ ಜಿಲ್ಲೆ ಎಂಬ ಹೆಸರು ಕೇಳಿದ ತಕ್ಷಣ ಬಹುತೇಕ ಎಲ್ಲರ ಮನಸ್ಸಿನಲ್ಲಿ ಮೂಡುವ ಚಿತ್ರಣ ಜೀವನದಿ ಕಾವೇರಿ, ಕಬ್ಬು, ಭತ್ತ, ರಾಗಿ ತೆಂಗಿನಂತಹ ವಾಣಿಜ್ಯ ಹಾಗೂ ಆಹಾರ ಬೆಳೆಗಳು, ಹಚ್ಚ ಹಸಿರಿನ ಗ್ರಾಮೀಣ ಪರಿಸರ ಕಣ್ಮುಂದೆ ಹಾದು ಹೋಗುತ್ತದೆ.ಇದು ಕೇವಲ ಬಾಹ್ಯ ನೋಟ.ಆದರೆ ಒಡಲಾಳದ ಚಿತ್ರಣವೇ ಬೇರೆ ಇದೆ. ಮೇಲೆ ಹೇಳಿದಂತಹ ಎಲ್ಲಾ ಸಂಪತ್ತುಗಳು ಇದ್ದರೂ ಸಹ ಇಲ್ಲಿನ ಜನರ ಆರ್ಥಿಕ ಸ್ಥಿತಿ ಮಾತ್ರ ಡೋಲಾಯಮಾನ. ಕೃಷಿಯೇ ಮೂಲ ಕಸುಬಾಗಿರುವುದರಿಂದ ಪ್ರಕೃತಿ ವಿಕೋಪ, ರೋಗ-ರುಜಿನ ಗಳಿಂದ ಬೆಳೆನಷ್ಟವಾಗುವುದು, ಕಷ್ಟಪಟ್ಟು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದಿರುವುದು, ಇಂತಹ ಕಾರಣಗಳಿಂದ ಜನರು ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆಯ ಮಾರ್ಗವನ್ನು ಹಿಡಿಯುವಂತಾಗಿದೆ. ಕೃಷಿಯ ಜೊತೆ ಉಪಕಸುಬುಗಳಾದ ಹೈನುಗಾರಿಕೆ, ಕೋಳಿ- ಮೇಕೆ ಸಾಕಾಣಿಕೆ, ಗುಡಿ ಕೈಗಾರಿಕೆಗಳು, ಸಣ್ಣ ಪುಟ್ಟ ವ್ಯಾಪಾರ ಇಂತಹ ಕೃಷಿಯೇತರ ಚಟುವಟಿಕೆಗಳನ್ನು ಕೈಗೊಂಡಿರುವವರು ಅಲ್ಪ ಸ್ವಲ್ಪ ಆದಾಯ ಕಾಣಬಹುದಾದರು ಇದರಿಂದ ನಿರೀಕ್ಷಿತ ಪ್ರಮಾಣದ ಲಾಭವೇನು ಇಲ್ಲಾ.ಏಕೆಂದರೆ ಇಂತಹ ವ್ಯವಹಾರಗಳ ಪ್ರಾರಂಭ ಹಾಗೂ ನಿರ್ವಹಣೆಗೆ ಸಾಕಷ್ಟು ಬಂಡವಾಳದ ಅವಶ್ಯಕತೆ ಇದೆ.ಇಂತಹ ಸಂದರ್ಭದಲ್ಲಿ ಬ್ಯಾಂಕುಗಳಿಂದ ಸಾಲ ಪಡೆದರು ಸಕಾಲಕ್ಕೆ ಮರುಪಾವತಿ ಮಾಡುವುದೇ ಸಮಸ್ಯೆಯಾಗಿ ಸಾಕಷ್ಟು ಸುಸ್ತಿ ಬಿದ್ದು ಬ್ಯಾಂಕುಗಳು ಸಾಲ ಕೊಡಲು ಹಿಂಜರಿಯುತ್ತಿದ್ದರಿಂದ ಜನರು ಖಾಸಗಿಯುವರ ಬಳಿ ಹೆಚ್ಚು ಬಡ್ಡಿ ನೀಡಿ ಸಾಲಪಡೆಯುವಂತ ಸ್ಥಿತಿ ನಿರ್ಮಾಣವಾಗಿತ್ತು.

ಇಂತಹ ಸಂದರ್ಭದಲ್ಲಿ ಆ ಧರ್ಮಸ್ಥಳ ಮಂಜುನಾಥ ಸ್ವಾಮೀಯ ಕೃಪೆಯೋ ಎಂಬಂತೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಂಡ್ಯ ಜಿಲ್ಲೆಗೆ ಪಾದಾರ್ಪಣೆ ಮಾಡಿತು. ಸಂಸ್ಥೆಯ ಮೂಲಕ ಗ್ರಾಮೀಣ ಭಾಗದ ಜನರನ್ನು ಅದರಲ್ಲೂ ವಿಶೇಷವಾಗಿ ಮಹಿಳೆಯರನ್ನು ಗುಂಪುಗೂಡಿಸಿ ಸ್ವ ಸಹಾಯ ಸಂಘಗಳ ರಚನೆ ಮಾಡಿ ಅದರ ಮುಖೇನ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಸಾಲದ ರೂಪದಲ್ಲಿ ಹಣಕಾಸಿನ ನೆರವು ನೀಡಿ ಅತ್ಯಂತ ಕಡಿಮೆ ಬಡ್ಡಿ ವಿಧಿಸಿ ಸಾಲ ಮರುಪಾವತಿಗೆ ಯಾವುದೇ ತೊಂದರೆಯಗದಂತೆ ತನ್ನ ಕಾರ್ಯಕ್ರಮಗಳನ್ನು ಯೋಜಿಸಿಕೊಂಡು ಜಿಲ್ಲಾದ್ಯಂತ ಸುಮಾರು 333 ಕೋಟಿ ರೂಪಾಯಿಗಳಿಗೂ ಹೆಚ್ಚಿನ ವಹಿವಾಟು ನಡೆಸುತ್ತಿದೆ. ವಿಶೇಷವೇನೆಂದರೆ ಯಾವುದೇ ಸ್ವ ಸಹಾಯ ಸಂಘದಿಂದ ಕೇವಲ ಒಂದು ರೂಪಾಯಿ ಕೂಡ ಸುಸ್ತಿ ಬೀಳದ ಹಾಗೆ ಸಾಲ ಮರುಪಾವತಿ ಆಗುತ್ತಿದೆ.ಈ ಮುಖೇನ ಜಿಲ್ಲೆಯ ಜನರ ಬಗ್ಗೆ ಇತರ ಬ್ಯಾಂಕುಗಳಿಗಿದ್ದ ನಕಾರಾತ್ಮಕ ಭಾವನೆ, ಅಂದರೆ ಮಂಡ್ಯ ಜಿಲ್ಲೆಯ ಜನ ತುಂಬಾ ಒರಟು ಸ್ವಭಾವದವರು ಇವರಿಗೆ ಸಾಲ ನೀಡಿದರೆ ವಸೂಲಾತಿ ಕಷ್ಟ ಎಂದೆಲ್ಲಾ ಯೋಚಿಸುತ್ತಿದ್ದ ಇವರಿಗೆ ಈ ಜಿಲ್ಲೆಯ ಹೆಣ್ಣು ಮಕ್ಕಳು ತಾವೆಷ್ಟು ಸ್ವಾಭಿಮಾನಿಗಳು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ದೇಶದಲ್ಲೇ ಅತ್ಯಂತ ದೊಡ್ಡ ಸಂಸ್ಥೆಯಾಗಿದೆ, ಇದು"ಮನೆ ಬಾಗಿಲಿಗೆ ಬ್ಯಾಂಕ್"ಎಂಬ ಚಿಂತನೆಯೊಂದಿಗೆ ಗ್ರಾಮೀಣ ಭಾಗದ ಜನರನ್ನು ಸಂಘಟಿಸಿ ಅವರಲ್ಲಿ ವ್ಯವಹಾರಿಕ ಸಾಮರ್ಥ್ಯವನ್ನು ಬೆಳೆಸಿ ಆರ್ಥಿಕವಾಗಿ ಸಧೃಡವಾಗಿ ಬೆಳೆಯುವಂತೆ ಮಾಡುವಲ್ಲಿ ಯಶಶ್ವಿಯಾಗಿದೆ. "ನಮಗಾಗಿ ನಾವು" ಎಂಬ ತತ್ವದಡಿಯಲ್ಲಿ ಸ್ವ ಸಹಾಯ ಗುಂಪುಗಳನ್ನು ರಚನೆಮಾಡಿ ಅದರ ಮೂಲಕ ಉಳಿತಾಯ ಹಾಗೂ ಸಾಲದ ಖಾತೆಗಳಲ್ಲಿ ಜನ ವ್ಯವಹರಿಸುವಂತೆ ಮಾಡುವಲ್ಲಿಯೂ ಸಂಸ್ಥೆ ಯಶಶ್ವಿಯಾಗಿದೆ.



ಶಿವಮೂರ್ತಿ ಕೀಲಾರ
ಅಧ್ಯಕ್ಷರು,
ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್.

ಜಿಲ್ಲೆಯ ಬಡ ಹಾಗೂ ಮಧ್ಯಮ ವರ್ಗದ ಅದರಲ್ಲೂ ವಿಶೇಷವಾಗಿ ಮಹಿಳೆಯರು ಹೈನುಗಾರಿಕೆ, ಕೋಳಿ- ಮೇಕೆ ಸಾಕಾಣಿಕೆ, ಗ್ರಾಮೀಣ ಗುಡಿ

*14ನೇ ಪುಟಕ್ಕೆ....*

# ಅಹಂ ಬ್ರಹ್ಮಾಸ್ಮಿ

'ನಾನು', 'ನನ್ನದು' ಎಂಬ ಅಹಂಭಾವವುಬಹಳ ಕೆಟ್ಟದ್ದು ಎನ್ನುತ್ತಾರೆ.ಹೀಗಿರುವಾಗ ಅಹಂ ಬ್ರಹ್ಮಾಸ್ಮಿ ಎಂಬುದು ತಪ್ಪಲ್ಲವೇ?ಅಹಂ ಬ್ರಹ್ಮಾಸ್ಮಿ ಎಂದು ಚಿಂತಿಸುವುದುನಮ್ಮಲ್ಲಿ ಅಹಂಭಾವವುಹೆಚ್ಚಿನಾವು ಅಧೋಗತಿಗಿಳಿಯಲು ಕಾರಣವಲ್ಲವೇ?'ಎಂದು ಒಬ್ಬ ಸಾಧಕನು ಸ್ವಾಮೀಜಿಯನ್ನು ಪ್ರಶ್ನಿಸಿದನು.

ಸಾಧಕನ ಸಂದೇಹಗಳಿಗೆ, ಸ್ವಾಮೀಜಿ ಹೀಗೆಂದು ಉತ್ತರಿಸಿದರು.ಸರಿ, ಸಾಧಕನದ ಜೀವನದಲ್ಲಿ ಅಹಂಗಿಂತ ದೊಡ್ಡ ಶತ್ರು ಬೇರಿಲ್ಲ. ಆದರೆ ಅಹಂ ಎಂಬುದಲ್ಲಿ ಎರಡು ರೀತಿಯದಾಗಿರುತ್ತದೆ.ಒಂದು ನಮ್ಮ ಶರೀರಕ್ಕೆ ಸಂಬಂಧಪಟ್ಟ ಅಹಂಭಾವ ಇನ್ನೊಂದು ಆತ್ಮಕ್ಕೆ ಸಂಬಂಧ ಪಟ್ಟ ವಿರಾಟವಾದ ಅಹಂ.

ಶರೀರ ವ್ಯಾಪ್ತಿಗೆ ಸಂಬಂಧಿಸಿದ ಅಹಂಭಾವವು ಆತ್ಮೋನ್ನತಿಗೆ ಮಾರಕವಾದುದು.ಜಾತಿ ಮತ, ವಂಶ ವಿದ್ಯೆ, ಅಧಿಕಾರ ಅಂತಸ್ತು, ಪದವಿಗಳ ಕುರಿತಾದ ಅಹಂ ಸಾಧಕನ ಜೀವನದಲ್ಲಿ ತೀರಾ ಅಪಾಯಕಾರಿಯಾದುದು, ಅಧಃಪತನಕ್ಕೆ ಕಾರಣವಾದುದು. ಆದ್ದರಿಂದ ಈ ಕ್ಷುಲ್ಲಕವಾದ ಅಹಂ ತ್ಯಾಜ್ಯವಾದುದು.

ಎರಡನೆಯದು ಆತ್ಮನಿಗೆ ಸಂಬಂಧಿಸಿದ ಅಹಂ.ಇದು ವಿರಾಟವಾದ ಅಹಂ.ಇದು ಆತ್ಮೋನ್ನತಿಯ ಮುಕ್ತಿಯ ಹಂತವನ್ನು ತಲುಪುತ್ತದೆ.

ನಮ್ಮಲ್ಲಿ ಈ ಕ್ಷುಲ್ಲಕ ಅಹಂಭಾವ ಎಲ್ಲಿಯವರೆಗೆ ಬೇರು ಬಿಟ್ಟಿರುತ್ತದೆಯೋ ಅಲ್ಲಿಯವರೆಗೂ ನಿತ್ಯ ಸತ್ಯವಾದ ವಿರಾಟ್ ಅಹಂ ಕಲ್ಪನೆಗೂ ಆಸ್ಪದವಿಲ್ಲ.

ಈ ಶರೀರ ಸಂಬಂಧವಾದ ಕ್ಷುಲ್ಲಕ ಅಹಂಭಾವವನ್ನು ಬಿಟ್ಟು ನಂತರವೇ ಆತ್ಮ ಸಂಬಂಧೀ ಅಹಂನ ವ್ಯಾಪ್ತಿಗೆ ಅವಕಾಶವಿದೆ. ವಿರಾಟ್ ಅಹಂನ ಪಡೆದ ನಂತರ ಸಾಧಕನಲ್ಲಿ ಕ್ಷುಲ್ಲಕವಾದ ಅಹಂ ಲವಲೇಶವೂ ಉಳಿಯುವುದಿಲ್ಲ. ವಿರಾಟ್ ಅಹಂ ಇಲ್ಲದಿದ್ದಲ್ಲಿ ಶರೀರಾಭಿಮಾನಿಯಾದ ಅಹಂ ನಮ್ಮ ಜೀವನವನ್ನು ನಿಯಂತ್ರಿಸಿ ನಡೆಸುತ್ತದೆ. ಇದರಿಂದ ಸಾಧಕನ. ಆತ್ಮೋನ್ನತಿಗೆ ಹಿನ್ನಡೆಯುಂಟಾಗುತ್ತದೆ.

ಮಾನವ ಜೀವಿತದ ಪರಮೋದ್ದೇಶವೆಂದರೆ ಕ್ಷುಲ್ಲಕ ಅಹಂ ತ್ಯಾಗ ಹಾಗೂ ಬ್ರಹ್ಮಸಾಕ್ಷಾತ್ಕಾರವಾಗಿದೆ.ಆದ್ದರಿಂದ ಆತ್ಮ ಸ್ವರೂಪಿಯಾದ ವಿರಾಟ್ ಬ್ರಹ್ಮ ಪ್ರಾಪ್ತಿಯೇ ಜೀವನದ ಪರಮೋದ್ದೇಶವೆಂದು ಸಾಧಕನು ತಿಳಿದು ಬೆಳಕಿನ ದಾರಿಯಲ್ಲಿ ನಡೆಯಬೇಕು.

ದೇಹ ಸಂಬಂಧವಾದ ಅಹಂ ಮತ್ತು ಆತ್ಮ ಸಂಬಂಧವಾದ ವಿರಾಟ್ ಅಹಂಗೆ ಇರುವ ವ್ಯತ್ಯಾಸಗಳನ್ನು ನಾವು ಗಮನಿಸಬೇಕು.

ಶರೀರವೇ 'ನಾನು' ಎಂಬಭಾವನೆ ಕ್ಷುಲ್ಲಕ ಅಹಂ ಲಕ್ಷಣ. ನನ್ನ ಜಾತಿ, ರೂಪ, ಬಣ್ಣ, ವಂಶ, ಭಾಷೆ, ಕೀರ್ತಿಪದವಿಸ್ಥಿತಿ ಇತ್ಯಾದಿಭೌತಿಕ ಜೀವನಕ್ಕೆಸಂಬಂಧಿಸಿದವಿಷಯವಿಚಾರಗಳಲ್ಲಿ ಇತರರಿಂದ ತಾನುಶ್ರೇಷ್ಠನೆಂಬಭಾವನೆ ತನ್ನ



ಕುಟುಂಬದಸದಸ್ಯರು ತನ್ನಮಕ್ಕಳು ತನ್ನಬಂಧುಗಳು ಮಹಾನ್ ವ್ಯಕ್ತಿತ್ವವನ್ನು ಹೊಂದಿರುವವರು ಎಂಬ ಅಧಮವಾದ ತೋರಿಕೆಯ ಭಾವವೇ ದೇಹಸಂಬಂಧವಾದ ಕ್ಷುಲ್ಲಕವಾದ ಅಹಂಭಾವ. ಆದರೆ ಸಚ್ಚಿದಾನಂದ ರೂಪವಾದ ವಿರಾಟ್ ಅಹಂ ನಾನು ಶರೀರವಲ್ಲ, ಭೌತಿಕವಾದ ಈ ಶರೀರ ಸಂಬಂಧವಾದ ಯಾವ ಗುಣಗಳ ಸೋಂಕೂ ನನಗಿಲ್ಲ, ದೇಶ, ಕಾಲ ವ್ಯಕ್ತಿ ಮುಂತಾದುವುಗಳಿಂದ ಹೊರತಾಗಿ ಅಹಂ ಪರಬ್ರಹ್ಮ ಸ್ವರೂಪವಾಗಿರುತ್ತದೆ.

ಶರೀರ ಸಂಬಂಧವಾದ ಅಹಂಭಾವದಲ್ಲಿ ಎಲ್ಲ ವಸ್ತುಗಳು, ವಿಷಯಾಸಕ್ತವಾಗಿ ಮೋಹ ಮಾಯಾ ಪಾಶಕ್ಕೆ

ವಶವರ್ತಿಯಾಗಿರುತ್ತದೆ. ಲೌಕಿಕ ಬಂಧನಕ್ಕೊಳಗಾಗಿ ಇವರು ನನ್ನವರು ಅವರು ಪರರು ಎಂಬ ತಾರತಮ್ಯ ಭಾವನೆಗಳಿಗೆ ಒಳಗಾಗುತ್ತಾನೆ. ಈ ಕಾರಣದಿಂದಲೇ ಮನುಷ್ಯನ ಮೋಹ ಮಾಯಾ ಪಾಶದಲ್ಲಿ ಸಿಲುಕಿ ವಿಲಿವಿಲಿ ಒದ್ದಾಡುತ್ತಾನೆ ಆದರೆ, ವಿರಾಟ್ ಅಹಂ ಅವತರಿಸಿದಲ್ಲಿ 'ವಸ್ತು', 'ದೈವ ಕುಟುಂಬಂ' ಎಂಬ ತತ್ವವನ್ನು ಕಾಣುತ್ತೇವೆ. ವಿಶ್ವವೇನನ್ನದು ಎಂಬಭಾವವಿರುತ್ತದೆ.ಅಂಡಪಿಂಡಬ್ರಹ್ಮಾಂಡಗಳಲ್ಲಿರುವ ಚರಾಚರಗಳೆಲ್ಲವೂ ನನ್ನದೇ ಅಥವಾ 'ನಾನೇ' ಎಂಬಭಾವದಲ್ಲಿತಾರತಮ್ಯಭಾವವಿಲ್ಲ. ಕ್ಷುಲ್ಲಕ ಅಹಂ ಕಾರಣದಿಂದ ಮಾನವನ ದೃಷ್ಟಿ ಹೊರಜಗತ್ತಿನೆಡೆಗೆ ಓಡುತ್ತಾ, ಕ್ಷಣಿಕ ಸುಖೋಪ ಭೋಗದೆಡೆಗೆ ಇಂದ್ರಿಯಗಳನ್ನು ತೊಡಗಿಸಿ ದಣಿಸಲು ಕಾರಣವಾಗುತ್ತದೆ, ತಣಿಸಲು ಕಾರಣವಾಗುವುದಿಲ್ಲ. ಮನಸ್ಸು ಮತ್ತು ವಿಷಯೇಂದ್ರಿಯಗಳು ವಿಕಾರವಾಗಲು ಕಾರಣವಾಗುತ್ತದೆಯೇ ವಿನಾ ದಿವ್ಯವಾಗಲು ಕಾರಣ ವಾಗುವುದಿಲ್ಲ.

ವಿರಾಟ್ ಅಹಂ ಭಾವವಾದರೋ ಮನುಷ್ಯನ ದೃಷ್ಟಿಯನ್ನು ಅಂತರ್ಮುಖಿಯನ್ನಾಗಿಸುತ್ತದೆ. ಪಂಚೇಂದ್ರಿಯಗಳನ್ನು ಒಳಮುಖವನ್ನಾಗಿ ತಿರುಗಿಸುತ್ತದೆ.ಮನವನು ಮನನದೆಡೆಗೆ ತಿರುಗಿಸುತ್ತದೆ.ಮನುಷ್ಯನು ಬ್ರಹ್ಮಾನಂದದಲ್ಲಿ ಲೀನವಾಗುವಂತೆ ಮಾಡುತ್ತದೆ.

ಕ್ಷುಲ್ಲಕವಾದ ಈ ದೇಹಾಭಿಮಾನದ ಅಹಂನಿಂದ ಮನುಷ್ಯನನ್ನು ಚಂಚಲಗೊಳಿಸುತ್ತದೆ. ಮನಸ್ಸನ್ನು ವಿಕಾರ ಗೊಳಿಸುತ್ತದೆ.ಮನಸ್ಸಿನ ದುರ್ಬಲತೆಗೆ ಕಾರಣವಾಗುತ್ತದೆ.ಆತ್ಮ ಸ್ವರೂಪಿ ಅಹಂ ಮನಸ್ಸಿನ ಸಮತ್ವವನ್ನು ಸ್ಥಾಪಿಸುತ್ತದೆ.ಸಮತ್ವ ಬುದ್ಧಿಯನ್ನು ಪೋಷಿಸುತ್ತದೆ.ಸ್ಥಿತ ಪ್ರಜ್ಞ ಭಾವವನ್ನು ಮೂಡಿಸಲು ವಿರಾಟ ಅಹಂ ಕಾರಂವಾಗಿದೆ. ಕ್ಷುಲ್ಲಕ ಅಹಂನಿಂದ ಬಂಧನಕ್ಕೆ ಸಿಲುಕಿ, ಸಾಂಸಾರಿಕ ಬಂಧನಕ್ಕೆ ಕಾರಣರಾಗುತ್ತೇವೆ. ಇಂದ್ರಿಯಗಳ ದಾಸರಾಗುತ್ತೇವೆ. ಆತ್ಮ ಸ್ವರೂಪೀ ಅಹಂ ಕಾರಣದಿಂದ ಅಸಂಗೋಹಂ ಎಂಬಂತೆ ಬಂಧ'ನಗಳಿಂದ ವಿಮುಕ್ತರಾಗಿ ಸದಾನಂದ ಸದವರೂಪಿಗಳಾಗುತ್ತೇವೆ ಸಚ್ಚಿದಾನಂದ ಬ್ರಹ್ಮವು ಮನಸ್ಸನ್ನು ಮುಕ್ತಗೊಳಿಸಿ ಜಗತ್ತನ್ನಾಳುವ ಶಕ್ತಿಯನ್ನು ಒಡಮೂಡಿಸುತ್ತದೆ.

ಕ್ಷುಲ್ಲಕ ಅಹಂ ಅಪೂರ್ವ ಹಾಗೂ ಭಿನ್ನ ಭಿನ್ನ ಭಾವನೆಗಳ ಸೀಮಿತ ವಲಯ ಪರಿಧಿಗೆ ಒಳಪಡುತ್ತದೆ. ಆದ್ದರಿಂದ ಈ ಅಹಂ ಭಾವವು ಹೀನ ಮಲಿನವಾಗಿದೆ. ವಿರಾಟ ಅಹಂ ಸ್ಥಿತಿ ಪರಿಪೂರ್ಣ ಸ್ಥಿತಿಯಾಗಿದೆ. ಪ್ರಕಾಶಮಾನವಾದ ಸ್ಥಿತಿಯಾಗಿದೆ.ಶಾಶ್ವತ ಹಾಗೂ ಅನಂತ ಸ್ಥಿತಿಯಾಗಿದೆ.

ಕ್ಷುಲ್ಲಕ ಅಹಂ ಕಾಮಕ್ರೋಧ ಲೋಭ ಮದ, ಮೋಹ, ಮತ್ಸರಗಳು ಸದಾ ನಮ್ಮಲ್ಲಿ ತಾಂಡವಾಡಲು ಕಾರಣವಾಗುತ್ತದೆ. ವಿರಾಟ ಅಹಂ ದುರ್ಗುಣಗಳನ್ನು ಹೊರದೂಡುತ್ತದೆ. ದಯೆ, ಕರುಣೆ, ಪ್ರೀತಿ, ಪರೋಪಕಾರಗಳಂತಹ ಪಾರಮಾರ್ಥಿಕ ಗುಣಗಳ ಗಣಿಯಾಗಲು ಕಾರಣವಾಗಿರುತ್ತದೆ.

ಕ್ಷುಲ್ಲಕವಾದ ಅಹಂಭಾವವು ಅತ್ಯಾಚಾರ, ಅನಾಚಾರಗಳು, ಅನ್ಯಾಯ ವಿಧ್ವಂಸಕ ಕೃತ್ಯಗಳು ನಡೆಯಲು ಪ್ರಚೋದಿಸುತ್ತದೆ. ವಿರಾಟ್ ಅಹಂನಿಂದ ಧರ್ಮ ಸತ್ಯ, ನ್ಯಾಯ ರೀತಿ, ನೀತಿ, ಮೌಲ್ಯಾದಿ, ಸೃಜನಾತ್ಮಕ ಕಾರ್ಯ ಪ್ರವೃತ್ತಿಯನ್ನು ಸಾಧಕನಲ್ಲಿ ನಿರಂತರವಾಗಿ ಪೋಷಿಸುತ್ತದೆ. ಆತ್ಮೋನ್ನತಿ ಹಾಗೂ ಜಗತ್ತಿನ ಹಿತ ಸಾಧನೆಗೆ ವಿರಾಟ್ ಅಹಂ ಕಾರಣವಾಗಿದೆ.

ಶರೀರ ಸಂಬಂಧೀ ಅಹಂನ್ನು ಪೋಷಿಸುವುದರಿಂದ ರಾಕ್ಷಸೀ ಪ್ರವೃತ್ತಿಯಲ್ಲಿ ತೊಡಗಿ ತಾಮಸಿಕ ಹಾಗೂ ರಾಜಸಿಕ ಜೀವನವನ್ನು ಅನುಭವಿಸುತ್ತಾ ಪಾಶಮೀ ಸ್ಥಿತಿಯನ್ನು ತಲುಪುತ್ತೇವೆ, ಅಥವಾ ಪಶುಗಳಿಗಿಂತಲೂ ಹೀನರಾಗುತ್ತೇವೆ.

ಸಚ್ಚಿದಾನಂದ ಸ್ವರೂಪವಾದ ವಿರಾಟ್ ಅಹಂನಿಂದ ಮಾನವನು ನಾರಾಯಣವಾಗುತ್ತಾನೆ. ಜೀವನದಲ್ಲಿ ಸದಾ ದೈವೀ ಗುಣಗಳೇ ತುಂಬಿ, ಸಂಪರ್ಕಕ್ಕೆ ಬರುವವರನ್ನೂ ಸಹ ಆಯಸ್ಕಾಂತದಂತೆ ದೈವೀ ಭಾವನೆಯೆಡೆಗೆ ಪ್ರೇರೇಪಿಸಲು ಕಾರಣರಾಗುತ್ತೇವೆ.

ಒಂದು ವಿಚಿತ್ರ ಸತ್ಯವೆಂದರೆ ಮನುಷ್ಯನಲ್ಲಿ ಕ್ಷುಲ್ಲಕವಾದ ಅಹಂಭಾವವು ಮೂಡಿ ಬೆಳೆದು, ಅವನ ಜೀವನವನ್ನು ವಿಕಾರಗೊಳಿಸುವಂತೆ ಬೇರಾವ ಪ್ರಾಣಿ ವರ್ಗದಲ್ಲೂ ನಾವು ಕಾಣುವುದಿಲ್ಲ. ಮನುಷ್ಯನ ಅಸಹಜವಾದ ಕೃತ್ರಿಮ ಹಾಗೂ ಅಮಾನುಷ ಜೀವನಕ್ಕೆ ಮೂಲ ಕಾರಣ ಈ ಕ್ಷುಲ್ಲಕವಾದ ಅಹಂಭವವೇ ಆಗಿದೆ. ದೇಹಾಭಿಮಾನಕ್ಕೆ ಕಾರಣವಾದ ಅನಿತ್ಯ ಅಹಂ ಇದ್ದಲ್ಲಿ ವಿರಾಟ ಅಹಂನ ಸ್ಥಾನಕ್ಕೆ ಅವಕಾಶವಿಲ್ಲ.

ಬ್ರಹ್ಮ ಪ್ರಾಪ್ತಿಗೆ ಎರಡೇ ಎರಡು ದಾರಿಗಳು, ಒಂದು ಕ್ಷುಲ್ಲಕವಾದ ಶರೀರ ಸಂಬಂಧದ ಅಹಂನ್ನು ಸಂಪೂರ್ಣ ತ್ಯಜಿಸುವುದು, ಎರಡನೆಯದು, ವಿರಾಟ ಅಹಂನ್ನು ತ್ಯಜಿಸುವುದರಿಂದ ವಿರಾಟ್ ಅಹಂಭಾವವನ್ನು ತಾನೇ ತಾನಾಗಿ ಪಡೆಯುತ್ತೇವೆ. ವಿರಾಟ್ ಅಹಂನ್ನು ಹೊಂದುವುದರಿಂದ ಶರೀರಭಿಮಾನದ ಕ್ಷುಲ್ಲಕ ಅಹಂ ತಾನೇ ತಾನಾಗಿ ಪಲಾಯನ ಮಾಡುತ್ತದೆ. ಸಾಧಕನಾದವನಿಗೆ ಈ ಎರಡೂ ದಾರಿಗಳೂ ಶ್ರೇಯಸ್ಕಾರವಾದ ಮೆಟ್ಟಿಲುಗಳೇ ಆಗಿವೆ.

**ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿ**

(ಸತ್ಸಂಗದ ಪ್ರವಚನ)

# ನ್ಯೂಟೋನಿಯಂ ಟೆಲಿಸ್ಕೋಪ್‌ನಿಂದ ಆಕಾಶವೀಕ್ಷಣೆ

ಮಂಡ್ಯದ ಶಂಕರ ನಗರದಲ್ಲಿರುವ ಅಭಿನವ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು ಆವರಣದಲ್ಲಿ ದಿನಾಂಕ 27–02–21 ರಂದು ಅಭಿನವ ಭಾರತಿ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ " ನ್ಯೂಟೇನಿಯಂ ಟೆಲಿಸ್ಕೋಪ್ ನಿಂದ ಆಕಾಶ ವೀಕ್ಷಣೆ " ಎಂಬ ಕಾರ್ಯಕ್ರಮವನ್ನು ಅಭಿನವ ಭಾರತಿ ಪ್ರೌಢಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅಂಜಲಿ ಜೋಷಿರವರ ಸಂಯೋಜನೆಯಲ್ಲಿ ನಿತ್ಯ ಜೀವನದಲ್ಲಿ ಖಗೋಳ ವಿಜ್ಞಾನ ಎಂಬ ವಿಷಯದ ಆಧಾರದ ಮೇಲೆ ಆಯೋಜಿಸಲಾಯಿತು.

ಅಭಿನವ ಭಾರತಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಸೌಮ್ಯ ಕುಲಕರ್ಣಿರವರ ನಿರೂಪಣೆಯೊಂದಿಗೆ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಅಭಿನವ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಯುತ ಲೋಕಪ್ರಕಾಶ್ ನಾರಾಯಣರವರು ತಮ್ಮ ಸ್ವಾಗತ ಭಾಷಣದಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಮಹತ್ವವನ್ನು ತಿಳಿಸುತ್ತಾ ಕಾರ್ಯಕ್ರಮವನ್ನು ವೀಕ್ಷಿಸಲು ನೆರೆದಿದ್ದ ಸರ್ವರನ್ನು ಮತ್ತು ವೇದಿಕೆಯಲ್ಲಿದ್ದ ಗಣ್ಯರನ್ನು ತುಂಬು ಹೃದಯದಿಂದ ಸ್ವಾಗತಿಸಿದರು.



ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ ಆಗಿರುವ ಮತ್ತು 16 ನೇ ರಾಷ್ಟ್ರೀಯ ವಿಜ್ಞಾನ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಪ್ರೊಫೆಸರ್ ಕೆ ಎಸ್ ರಂಗಪ್ಪ ರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಮೀರ ಶಿವಲಿಂಗಯ್ಯನವರ ಕಾರ್ಯವೈಖರಿಯನ್ನು ಪ್ರಶಂಸಿಸುತ್ತಾ ಅವರನ್ನು ಮಂಡ್ಯ ಜಿಲ್ಲೆಯ ಹೆಮ್ಮೆಯ ಮಗಳು ಎಂದು ಸಂಭೋದಿಸಿದರು. ಅಭಿನವ ಭಾರತಿ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಗಳಾಗಿರುವ ಶ್ರೀ ಶಿವಮೂರ್ತಿ ಕೀಲಾರ ರವರು ಶ್ರೀ ಅನಂತ ಕುಮಾರ ಸ್ವಾಮೀಜಿರವರ ನಂತರ ಸಂಸ್ಥೆಯ ಜವಾಬ್ದಾರಿ ಹೊತ್ತು ಕಡಿಮೆ ವೆಚ್ಚದಲ್ಲಿ ಮಂಡ್ಯದ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವುದಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶದಿಂದ ಅಭಿನವ ಭಾರತಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳನ್ನು ಅಮೇರಿಕಾದ ನಾಸಾಕ್ಕೆ ಕರೆದುಕೊಂಡು ಹೋಗಿರುವುದು ಒಂದು ದೊಡ್ಡ ಸಾಧನೆ ಎಂದು ತಿಳಿಸಿದರು. "ಯಾವುದು ಅಸಾಧ್ಯವಾಗಿರುವುದೊ ಅದು ಸಾಧ್ಯವಾಗುವುದು ವಿಜ್ಞಾನದ ಪ್ರವೇಶದ ನಂತರ" ಎಂಬ ಮಾತನ್ನು ವ್ಯವಸ್ಥಿತ ವಿಜ್ಞಾನಕ್ಕಿರುವ ಮಹತ್ವವನ್ನು ಮಕ್ಕಳಿಗೆ ಪರಿಚಯಿಸಿದರು. ' ವಿಜ್ಞಾನವಿಲ್ಲದೆ ಪ್ರಪಂಚವೇ ಶೂನ್ಯ' ಎಂದು ತಿಳಿಸುತ್ತಾ ಶಿಕ್ಷಕರು ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಪ್ರಯತ್ನಿಸಬೇಕೆಂದು ತಿಳಿಸಿದರು. ವಿದ್ಯಾರ್ಥಿಗಳು ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಿ ಹೊಸ ಹೊಸ ಆವಿಷ್ಕಾರ ಮತ್ತು ಸಂಶೋಧನೆಗಳಲ್ಲಿ ತೊಡಗಿಸಿಳ್ಳುವ ಕೌಶಲ್ಯ ಜ್ಞಾನ ಹೆಚ್ಚಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು. ನಿತ್ಯಜೀವನದಲ್ಲಿ ಖಗೋಳ ವಿಜ್ಞಾನ ಎಂಬ ವಿಷಯವನ್ನು ವಿವಿಧ ಉದಾಹರಣೆಗಳೊಂದಿಗೆ ವಿವರಿಸುತ್ತಾ ಕ್ಯಾಲೆಂಡರ್ ನಮ್ಮ ನಿತ್ಯ ಜೀವನದ ಭಾಗ ಅದರ ರಚನೆ ಆಗುವುದು ಖಗೋಳ ವಿಜ್ಞಾನದ ಸಹಾಯದಿಂದ ಎಂದು ತಿಳಿಸುತ್ತಾ ಖಗೋಳ ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಅವಿಷ್ಕಾರಗಳು ನಡೆದರೆ ಜಗತ್ತಿನ ಹಲವಾರು ಸಮಸ್ಯೆಗಳು ಪರಿಹಾರವಾಗುತ್ತವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಬಡತನ ನಮ್ಮ ಸಾಧನೆಗೆ ಅಡ್ಡಿ ಪಡಿಸುವುದಿಲ್ಲ ಎಂದು ಹೇಳುತ್ತಾ ಕಡು ಬಡತನದಲ್ಲಿದ್ದು ಅದ್ಭುತ ಸಾಧನೆ ಮಾಡಿದ ಮಹಾನ್ ವ್ಯಕ್ತಿಗಳ ಹೆಸರು ಪ್ರಸ್ತಾಪಿಸಿದರು. ನೊಬೆಲ್ ಪುರಸ್ಕಾರ ಪಡೆದ ಮೇರಿಕ್ಯೂರಿ ತಮ್ಮ ವಿದ್ಯಾಭ್ಯಾಸದ ಸಮಯದಲ್ಲಿ 5 ಮನೆಯ ಕೆಲಸ ಮಾಡಿ ಶಾಲೆಗೆ

ಹೋಗುತ್ತಿದ್ದರು. ನೊಬೆಲ್ ಪ್ರಶಸ್ತಿ ಪಡೆದ ಹಲವರು ಕಡುಬಡತನದಲ್ಲಿ ಬೆಳೆದು ಬಂದವರಾಗಿದ್ದಾರೆ. ಆದ್ದರಿಂದ ನಿಮ್ಮಮನೆಯಲ್ಲಿ ಬಡತನವಿದ್ದರೂ ಸಾಧಿಸುವ ಛಲವಿದ್ದರೆ ನೀವು ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಬಹುದೆಂದು ಮಕ್ಕಳಿಗೆ ಕಿವಿಮಾತು ಹೇಳಿದರು.ಶ್ರೀಯುತ ಪ್ರೊಫೆಸರ್ ಕೆ ಎಸ್ ರಂಗಪ್ಪ ಅವರನ್ನು ಸಂಸ್ಥೆಯ ವತಿಯಿಂದ ಮಾಲಾರ್ಪಣೆಯೊಂದಿಗೆ ಸನ್ಮಾನಿಸಲಾಯಿತು.ಅಭಿನವ ಭಾರತಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕಿಯರಾದ ಶ್ರೀಮತಿ ಪೂಜಾರವರು ಶ್ರೀಯುತರ ಕಿರುಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್.ಬಿ. ಎಜುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿಗಳೂ ಆಗಿರುವ ಶ್ರೀಮತಿ ಮೀರಾ ಶಿವಲಿಂಗಯ್ಯ ಅವರು ಸಾಮಾನ್ಯರು ಅಸಾಮಾನ್ಯ ಸಾಧನೆಯನ್ನು ಮಾಡಬಹುದೆಂದು ಶ್ರೀ ಶಿವಮೂರ್ತಿ ರವರು ತೋರಿಸಿಕೊಟ್ಟಿದ್ದಾರೆ. ಅವರೊಂದಿಗೆ ಕೆಲಸ ಮಾಡುವುದು ನಮ್ಮೆಲ್ಲರ ಹೆಮ್ಮೆ ಎಂದು ತಿಳಿಸಿದರು.



**ಚಕ್ರೀನಂದನ. ಪಿ**
ಸಹ ಶಿಕ್ಷಕರು, ಅಭಿನವ ಭಾರತಿ ವಿದ್ಯಕೇಂದ್ರ ಪ್ರೌಢ ಶಾಲೆ ಮಂಡ್ಯ

ಖಗೋಳವಿಜ್ಞಾನವೂ ವಿಜ್ಞಾನದ ಹೆಬ್ಬಾಗಿಲು ಯಾಕೆಂದರೆ ನಕ್ಷತ್ರ ಗ್ರಹಗಳು ಮುಂತಾದ ಆಕಾಶಕಾಯಗಳ ವೀಕ್ಷಣೆಯಿಂದ ಮಕ್ಕಳಲ್ಲಿ ವಿಜ್ಞಾನದ ಬಗೆಗೆ ಆಸಕ್ತಿ ಹುಟ್ಟಿ ಕ್ರಿಯಾತ್ಮಕವಾಗಿ ವಿಜ್ಞಾನ ಕಲಿಕೆಯಲ್ಲಿ ತೊಡಗುತ್ತಾರೆ. ಈಗ ನಮೆಲ್ಲರಿಗೂ ಅತ್ಯವಶ್ಯಕವಾಗಿ ಬೇಕಾಗುವುದು ಜಿಪಿಎಸ್ ಇದು ಖಗೋಳ ವಿಜ್ಞಾನದ ಫಲಶ್ರುತಿ. ಮಕ್ಕಳು ಶಾಲೆಗಳಲ್ಲಿ ಮೂಲಭೂತ ವಿಜ್ಞಾನ ಕಲಿಯುವಂತಾಗಲು ವಿಜ್ಞಾನದ ಬಗ್ಗೆ ಆಸಕ್ತಿಯನ್ನು ಹೊಂದಲು ಇಂತಹ ಕಾರ್ಯಕ್ರಮಗಳು ಅರ್ಥಪೂರ್ಣ. 1986 ರಲ್ಲಿ ನ್ಯಾಷನಲ್ ಕೌನ್ಸಿಲ್ ಫಾರ್ ಸೈನ್ಸ್ ಎಂಡ್ ಟೆಕ್ನಾಲಜಿ ಕಮ್ಯುನಿಕೇಶನ್ಸ್ (NCSTC)ಕೇಂದ್ರ ಸರ್ಕಾರಕ್ಕೆ ಫೆ 28 ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲು ಮನವಿ ಸಲ್ಲಿಸಿತ್ತು. NCSTC ಯ ಈ ಮನವಿಯನ್ನು ಒಪ್ಪಿದ ಅಂದಿನ ಸರ್ಕಾರ ಫೆ 28 ನ್ನು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ದೇಶದಾದ್ಯಂತ ಆಚರಿಸುವಂತೆ ಘೋಷಿಸಿತು. ವಿಶ್ವಕ್ಕೆ ರಾಮನ್ ಎಫೆಕ್ಟ್ ನೀಡಿದ ದಿನವನ್ನು ರಾಷ್ಟ್ರೀಯ ವಿಜ್ಞಾನ ದಿನವೆಂದು ಆಚರಿಸಲಾಗುತ್ತಿದೆ. ವಿಜ್ಞಾನ ವಿಭಾಗದ ನೊಬೆಲ್ ಪ್ರಶಸ್ತಿ ಪಡೆದ ಏಷ್ಯಾದ ಮೊದಲ ವಿಜ್ಞಾನಿ ಸರ್ ಸಿ ವಿ ರಾಮನ್ ರವರು ಫೆ 28 ರಂದು ತಮ್ಮ ಪ್ರಖ್ಯಾತ ರಾಮನ್ ಎಫೆಕ್ಟ್ ಸಿದ್ಧಾಂತವನ್ನು ಜಗತ್ತಿಗೆ ಪರಿಚಯಿಸಿದರು. ನಮ್ಮ ದೇಹವೇ 1ಅದ್ಭುತ ವಿಸ್ಮಯ ಅದನ್ನೇ ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡು ವ್ಯವಸ್ಥಿತವಾಗಿ ಬಳಸಿದರೆ ಎಲ್ಲರೂ ಅದ್ಭುತಗಳನ್ನು ಸಾಧಿಸಬಹುದು ಎಂದು ತಮ್ಮ ಅನುಭವದ ನುಡಿ ಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಶಿವಮೂರ್ತಿ ಕೀಲಾರ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ 1ಸಮೀಕರಣದ ಮೂಲಕ ಸಿ ವಿ ರಾಮನ್ ಮತ್ತು ಪೂಜ್ಯ ಅನಂತಕುಮಾರ ಸ್ವಾಮೀಜಿ ಅವರ ಸಾಧನೆಯನ್ನು ತಾಳೆ ಮಾಡಿದರು.

ಸಿ ವಿ ರಾಮನ್ --> ಚೆನ್ನೈ --> ಸಾಧನೆ --> ಬೆಂಗಳೂರು

ಅನಂತಕುಮಾರ ಸ್ವಾಮೀಜಿ --> ವಾರಣಾಸಿ --> ಸಾಧನೆ --> ಮಂಡ್ಯ. ನಂತರ ಸಂಸ್ಥೆಯಲ್ಲಿರುವ ನ್ಯೂಟನಿಯನ್ ಟೆಲಿಸ್ಕೋಪನ್ನು ಪರಿಚಯಿಸುತ್ತಾ, ಯಾವ ಶಾಲೆಯವರು ಬೇಕಾದರೂ ಅದನ್ನು ತೆಗೆದುಕೊಂಡು ಹೋಗಿ ಅದರ ಪ್ರಯೋಜನ ಪಡೆಯಬಹುದು ಎಂದು ತಿಳಿಸಿದರು.

ಕೆ ಎಸ್ ರಂಗಪ್ಪ ನವರಂತಹ ವಿಜ್ಞಾನಿಗಳ ಮಂಡ್ಯ ಲೋಕಸಭೆ ಚುನಾವಣೆಗೆ ನಿಂತು ಗೆದ್ದು ಬಂದು ಮಂಡ್ಯದಲ್ಲಿ ಮತ್ತು ದೇಶದೆಲ್ಲೆಡೆ ವಿಜ್ಞಾನಿಗಳನ್ನು ಹುಟ್ಟಿ ಹಾಕುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂಬ ಸದಾಶಯವನ್ನು ವ್ಯಕ್ತಪಡಿಸಬೇಕು. ಮಂಡ್ಯಕ್ಕೆ ಮೊದಲು ಕಂಪ್ಯೂಟರ್ ತಂದಿರುವುದು ಮೀರ ಶಿವಲಿಂಗಯ್ಯನವರು, ಮಂಡ್ಯಕ್ಕೆ ಮೊದಲು ಟೆಲಿಸ್ಕೋಪ್ ತಂದಿರುವವರು ನಾವು ಎಂದು ತಿಳಿಸುತ್ತಾ ಸಂಸ್ಥೆಯ ವತಿಯಿಂದ ನಡೆಯುವ ಉತ್ತಮ ಕಾರ್ಯಕ್ರಮಗಳಲ್ಲಿ ಸಂಸ್ಥೆಯ ಎಲ್ಲ ಮುಖ್ಯಸ್ಥರು ಮತ್ತು ಶಿಕ್ಷಕ ವೃಂದ ಕೈಜೋಡಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು ಮತ್ತು ಸರ್ವರನ್ನು ವಂದಿಸಿದರು.

*8ನೇ ಪುಟಕ್ಕೆ....*

# 2020–21 ಸಾಲಿನ ಎಸ್ ಎಸ್ ಎಲ್ ಸಿ ಫಲಿತಾಂಶ

## ಅಭಿನವ ಭಾರತಿ ಪ್ರೌಢಶಾಲೆ, ಮಂಡ್ಯ.

ಮನಸ್ಸೇ ಮಾನವನ ಬಯಕೆಗಳ ಜನ್ಮಭೂಮಿ. ಬಯಕೆಗಳು ಅಳಿಯದ ಹೊರತು ಮುಕ್ತಿ ಸಿಗದು, ಪರಿಶುದ್ಧವಾದ ಮನಸ್ಸೇ ಯಶಸ್ಸಿನ ಸಾಧನೆಯಂಬಂತೆ ಮಂಡ್ಯ ನಗರದ ಸುಮಾರು ಮುನ್ನೂರು ಶಾಲೆಗಳಲ್ಲಿ



ಸತತವಾಗಿ 3 ವರ್ಷಗಳಿಂದ ಪ್ರಥಮ ಸ್ಥಾನವನ್ನು ಪಡೆದುಕೊಳ್ಳುತ್ತಿರುವ ಏಕೈಕ ಶಾಲೆ ಎಂದರೆ ಅದುವೇ ಅಭಿನವ ಭಾರತಿ ಪ್ರೌಢಶಾಲೆ. 2020–21ನೇ ಸಾಲಿನ ಜುಲೈ ಮಾಹೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅಭಿನವ ಭಾರತಿ ವಿದ್ಯಾಕೇಂದ್ರ ಪ್ರೌಢಶಾಲೆಯಿಂದ ಸುಮಾರು 97 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದರು. ಅದರಲ್ಲಿ 88 ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕು.ಶ್ವೇತಾರಾಣಿ ಎಂಬ ವಿದ್ಯಾರ್ಥಿನಿಯು 625 ಕ್ಕೆ 623 ಅಂಕಗಳನ್ನು ಗಳಿಸಿ ಶಾಲೆಯು 'A' ದರ್ಜೆಯುನ್ನು ಪಡೆದುಕೊಂಡು ಸಾಧನೆಯತ್ತ ದಾಪುಗಾಲು ಹಾಕುತ್ತಾ ಮುನ್ನುಗ್ಗುತ್ತಿದೆ. ಕನ್ನಡದಲ್ಲಿ 125/125 ಅಂಕಗಳನ್ನು 04 ವಿದ್ಯಾರ್ಥಿಗಳು, ಇಂಗ್ಲಿಷ್‌ನಲ್ಲಿ 100/100 ಅಂಕಗಳನ್ನು 32 ವಿದ್ಯಾರ್ಥಿಗಳು, ಹಿಂದಿಯಲ್ಲಿ 100/100 ಅಂಕಗಳನ್ನು 39 ವಿದ್ಯಾರ್ಥಿಗಳು, ಗಣಿತದಲ್ಲಿ 100/100 ಅಂಕಗಳನ್ನು 02 ವಿದ್ಯಾರ್ಥಿಗಳು, ವಿಜ್ಞಾನದಲ್ಲಿ 100/100 ಅಂಕಗಳನ್ನು 01 ವಿದ್ಯಾರ್ಥಿ ಹಾಗೂ ಸಮಾಜದಲ್ಲಿ 100/100 ಅಂಕಗಳನ್ನು 01 ವಿದ್ಯಾರ್ಥಿ ಗಳಿಸಿರುತ್ತಾರೆ. ಇಷ್ಟೇ ಅಲ್ಲದೆ 580 ಕ್ಕೂ ಹೆಚ್ಚು ಅಂಕಗಳನ್ನು ಸುಮಾರು ನಲವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ಈ ರೀತಿಯಲ್ಲಿ ಅಂಕಗಳನ್ನು ಪಡೆದು ಕೊಳ್ಳುವುದರ ಮೂಲಕ ಶಾಲೆಯ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ. ಸಾಧನೆ ಎಂಬುದು ಸಾಧಕರ ಸೊತ್ತು ಎಂಬುದನ್ನು ವಿದ್ಯಾರ್ಥಿಗಳು ತೋರಿಸಿಕೊಟ್ಟಿದ್ದಾರೆ. ಇಂತಹ ಸಾಧನೆಗೈದ ವಿದ್ಯಾರ್ಥಿಗಳನ್ನು ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಚಂದ್ರಕಾಂತರವರು ತುಂಬು ಹೃದಯದಿಂದ ಹಾರೈಸಿ ಅಭಿನಂದಿಸಿದ್ದಾರೆ. ಈ ಸಾಧನೆಗೆ ಪ್ರೋತ್ಸಾಹಕರಾಗಿ ನಿಂತು ಸದಾ ಕಾರ್ಯೋನ್ಮುಖ ರಾಗಿರುವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಮೂರ್ತಿ ಕೀಲಾರರವರು ಕೂಡ ತುಂಬು ಹೃದಯದಿಂದ ಹಾರೈಸಿ ಅಭಿನಂದಿಸಿದ್ದಾರೆ. ಹಾಗೂ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಅಂಜಲಿ ಜೋಷಿ ರವರು ಹಾಗೂ ಬೋಧಕ ಹಾಗೂ ಬೋಧಕೇತರು ವರ್ಗದವರು ಶುಭಕೋರಿದ್ದಾರೆ.

## ವೆಂಕಟೇಶ್ವರ ವಿದ್ಯಾನಿಕೇತನ ಪ್ರೌಢಶಾಲೆ, ಹೊಳಲು.

**ಇಳೆಯಿಂದ ಮೊಳಕೆ ಒಗೆವಂದು ತಮಟೆಗಳಿಲ್ಲ**
**ಫಲ ಮಾಗುವಂದು ತುತ್ತೂರಿ ದನಿಯಿಲ್ಲ**
**ಬೆಳಕೀವ ಸೂರ್ಯಚಂದ್ರರ ದೊಂದು ಸದ್ದಿಲ್ಲ**
**ಹೊಲಿ ನಿನ್ನ ತುಟಿಗಳನು' ಮಂಕುತಿಮ್ಮ.**

ಡಿವಿಜಿಯವರು ಹೇಳಿರುವಂತೆ ನಮ್ಮ ಶಾಲೆಯ ಮಕ್ಕಳು ಮೌನವಾಗಿ ಸಾಧನೆಯ ಮೆಟ್ಟಿಲೇರಿದ್ದಾರೆ. ಇದರ ಹಿಂದೆ ನಮ್ಮ ಪ್ರೌಢಶಾಲೆಯ ಎಲ್ಲಾ ಶಿಕ್ಷಕ– ಶಿಕ್ಷಕಿಯರ ಪರಿಶ್ರಮಕ್ಕೆ ನಮ್ಮ ವಿದ್ಯಾರ್ಥಿಗಳು ಮೆರುಗು ನೀಡಿದ್ದಾರೆ.

ಕೇವಲ ಪಟ್ಟಣಕ್ಕೆಂದೆ ಸೀಮಿತವಾಗಿರುವ ಪ್ರಗತಿಶೀಲ ವಿದ್ಯಾಸಂಸ್ಥೆಗಳು ಸ್ಪರ್ಧಾತ್ಮಕ ವಿದ್ಯಾಭ್ಯಾಸ, ಸೃಜನಶೀಲತೆ, ಆಧ್ಯಾತ್ಮಿಕತೆ, ಹಿರಿಮೆ, ಗರಿಮೆಗಳು ಪಟ್ಟಣದ ಮಕ್ಕಳಿಗೆ ಸೀಮಿತವೆಂದು ಕೆಲವರ ಅಭಿಪ್ರಾಯ. ಇಂತಹ ಮನೋಭಾವ

ಹೊಡೆದೋಡಿಸುವ ಸುಲಭವಾಗಿ ನಮ್ಮ ಶಾಲೆಯ ಮಕ್ಕಳು ಕಂಕಣ ಬದ್ಧರಾಗಿ ಎಲ್ಲಾ ವರ್ಷದ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ ನೂರಕ್ಕೆ ನೂರರಷ್ಟು ಫಲಿತಾಂಶವನ್ನು ನೀಡುತ್ತಲೇ ಬಂದಿದ್ದಾರೆ. ಈ ವರ್ಷವೂ ಸಹ 2021–22 ನೇ ಸಾಲಿನಲ್ಲಿ 84 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಮತ್ತು 11 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಶಾಲೆಗೆ ಕೀರ್ತಿ ತಂದಿದ್ದಾರೆ. ಇದು ಸಾಧ್ಯವಾಗಿರುವುದು ಶ್ರೀ ವೆಂಕಟೇಶ್ವರ ಸ್ವಾಮಿಯ ಕೃಪೆ ಹಾಗೂ ನಮ್ಮ ನೆಚ್ಚಿನ ಶ್ರೀ ಶ್ರೀ ಅನಂತಕುಮಾರ ಸ್ವಾಮೀಜಿಯವರ ಆಶೀರ್ವಾದ ಮತ್ತು ಮೆಚ್ಚಿನ ಕಾರ್ಯದರ್ಶಿಗಳಾದ ಶಿವಮೂರ್ತಿ ಕಿಲಾರ ರವರ ಹಾರೈಕೆಯಿಂದ. ★




# ನ್ಯೂಟೋನಿಯಂ ಟೆಲಿಸ್ಕೋಪ್‌ನಿಂದ ಆಕಾಶವೀಕ್ಷಣೆ

*...6ನೇ ಪುಟದಿಂದ*

ನಂತರ ಮಂಡ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಗಣಿತ ವಿಷಯ ಪರಿವೀಕ್ಷಕರಾದ ಶ್ರೀ ಲೋಕೇಶ್ ಎಸ್ ರವರು ಇಂದಿನ ಕಾರ್ಯಕ್ರಮ ವಿಷಯದಲ್ಲಿ ನಿತ್ಯಜೀವನದಲ್ಲಿ ಖಗೋಳ ವಿಜ್ಞಾನದ ಬಗ್ಗೆ ಮುಖ್ಯಾಂಶಗಳ ಟಿಪ್ಪಣಿ ನೀಡುತ್ತಾ ಆಕಾಶಕಾಯಗಳು ಪ್ರಕೃತಿಯ ಒಂದು ಅದ್ಭುತಸೃಷ್ಟಿ. ಗ್ರಹಗಳು, ನಕ್ಷತ್ರಗಳು, ಸೂರ್ಯ ಗ್ರಹಣ, ಚಂದ್ರಗ್ರಹಣ ಇವೆಲ್ಲ ಮನುಷ್ಯರ ಬದುಕಿನಲ್ಲಿ ಯಾವುದೇ ಪ್ರಭಾವ ಬೀರುವುದಿಲ್ಲ ಮೂಢನಂಬಿಕೆಗಳೆಲ್ಲವೂ ಸುಳ್ಳು ಎಂದು ಪ್ರತಿಪಾದಿಸಿದರು. ಇದುವರೆಗೆ ನಡೆಸಿರುವ ಮತ್ತು ಮುಂದೆ ನಡೆಯಲಿರುವ ಆಗಸದ ಕೌತುಕಗಳಾದ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣ ಗಳನ್ನು ನಾವು ಯಾವಾಗ ಬೇಕಾದರೂ ಗೂಗಲ್ ಸಹಾಯದಿಂದ ನೋಡಬಹುದು ಇದು ಸೃಷ್ಟಿಯ ಕರಾರುವಾಕ್ ನಿಯಮವನ್ನು ತೋರಿಸುತ್ತದೆ ಎಂದು ತಿಳಿಸಿದರು. ಸರ್ ಸಿ ವಿ ರಾಮನ್ ರವರ ರಾಮನ್ ಪರಿಣಾಮ ಬಗ್ಗೆ ವಿವರಿಸುತ್ತಾ ರಾಮನ್ ರವರಿಗೆ ನೊಬೆಲ್ ಪ್ರಶಸ್ತಿ ದೊರೆತಾಗ ಅವರಿಗೆ ಸಂತೋಷವಾಗಿರಲಿಲ್ಲ ಅವರು ಅಳುತ್ತಿದ್ದರಂತೆ ಎಕೆಂದರೆ ಅವರಿಗೆ ನೊಬೆಲ್ ಪ್ರಶಸ್ತಿ ದೊರೆತಾಗ ಬ್ರಿಟಿಷ್ ಧ್ವಜವನ್ನು ಹಾರಿಸಲಾಯಿತು ಸ್ವತಂತ್ರ ಭಾರತದಲ್ಲಿ ನಮಗೆ ನೊಬೆಲ್ ಪ್ರಶಸ್ತಿ ದೊರೆತಿಲ್ಲ ಎಂದು ಸಿ ವಿ ರಾಮನ್ ರವರು ಅತಿ ದುಃಖಿತರಾಗಿದ್ದರು. ನಂತರ ದೃಶ್ಯ ಮಾಧ್ಯಮದ ಮೂಲಕ ಸೂರ್ಯಗ್ರಹಣ ಖಂಡಾಂತರ ಚಲನೆ ವಿಶ್ವದ ಅದ್ಭುತ ಮತ್ತು ಆಕಾಶ ನೌಕೆಗಳಲ್ಲಿ ಜನ ಜೀವನ ಹೇಗಿರುತ್ತದೆ ಎಂದು ತೋರಿಸಿದರು.ಅಂತಿಮವಾಗಿ ಶ್ರೀ ಲೋಕೇಶ್ ಎಸ್ ರವರನ್ನು ಸಂಸ್ಥೆಯ ವತಿಯಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ಶಾಲೆಗೆ ಬಂದು ಮಕ್ಕಳಿಗೆ ಖಗೋಳ ವಿಜ್ಞಾನದ ಮಾಹಿತಿ ನೀಡಿದ್ದಕ್ಕೆ ಹೃದಯ ಪೂರ್ವಕ ವಂದನೆಗಳನ್ನು ಸಲ್ಲಿಸಲಾಯಿತು. ★

# ಸಂಪ್ರದಾಯದ ಮೂಲ ನೆಲೆ

ಶಿವಲಿಂಗಕ್ಕೆ ಅರ್ಧಪ್ರದಕ್ಷಿಣೆಯನ್ನು ಏಕೆ ಹಾಕುತ್ತಾರೆ ?

ಪಾಣಿಪೀಠದಿಂದ ಉತ್ತರ ದಿಕ್ಕಿನ ಕಡೆಗೆ ಮಂದಿರದ ವಿಸ್ತಾರದ ಕೊನೆಯವರೆಗೆ ಹೋಗುವ ಹರಿನಾಳಕ್ಕೆ ಸೋಮಸೂತ್ರವೆನ್ನುತ್ತಾರೆ.

ಶಿವಲಿಂಗದ ಎದುರು ನಿಂತಾಗ ಬಲಬದಿಗೆ ಅಭಿಷೇಕದ ನೀರು ಹೋಗುವ ಹರಿನಾಳವಿರುತ್ತದೆ.

ಪ್ರದಕ್ಷಿಣೆಯ ಮಾರ್ಗವು ಅಲ್ಲಿಂದ ಆರಂಭವಾಗುತ್ತದೆ. ಪ್ರದಕ್ಷಿಣೆ ಹಾಕುವಾಗ ಹರಿನಾಳದಿಂದ ಆರಂಭಿಸಿ ತಮ್ಮ ಎಡಬದಿಯಿಂದ ಹರಿನಾಳದ ಇನ್ನೊಂದು ಬದಿಯವರೆಗೆ ಹೋಗಬೇಕು.

ನಂತರ ಹರಿನಾಳವನ್ನು ದಾಟದೇ ಹಿಂತಿರುಗಿ ಪುನಃ ಹರಿನಾಳದ ಮೊದಲ ಬದಿಯವರೆಗೆ ಬಂದು ಪ್ರದಕ್ಷಿಣೆ ಪೂರ್ಣಗೊಳಿಸಬೇಕು.

ಪ್ರದಕ್ಷಿಣೆ ಫಲ – ಎಷ್ಟು ಬಾರಿ ಪ್ರದಕ್ಷಿಣೆ ಹಾಕಬೇಕು?

ಪ್ರದಕ್ಷಿಣೆ ಯಾಕೆ ಹಾಕುತ್ತೇವೆ ಎಂಬುದು ಹೆಚ್ಚಿನವರಿಗೆ ತಿಳಿದಿಲ್ಲ. ಭಗವಂತನ ಬಳಿ ನಿನ್ನ ಬಿಟ್ಟರೆ ನಮ್ಮನ್ನು ಕಾಯುವವರು ಯಾರು ಇಲ್ಲ, ನೀನು ತೋರಿಸಿದ ಮಾರ್ಗದಲ್ಲಿ ನಡೆಯುತ್ತೇವೆ ಎಂಬುದು ಈ ಪ್ರದಕ್ಷಿಣೆ ಅರ್ಥ.

ದೇವಸ್ಥಾನದಲ್ಲಿ ಪ್ರದಕ್ಷಿಣೆಯನ್ನು ಎಷ್ಟು ಬಾರಿ ಮಾಡಿದರೆ ಏನು ಫಲ ಎಂಬುದನ್ನು ತಿಳಿಯೋಣ.

ದೇವಸ್ಥಾನದಲ್ಲಿ 5 ಬಾರಿ ಪ್ರದಕ್ಷಿಣೆ ಮಾಡಿದರೆ ಜಯ ಸಿಗುತ್ತದೆ.7ಬಾರಿ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕಿದರೆ ಶತ್ರುಗಳನ್ನು ಪರಜಯ ಮಾಡಬಹುದು.9 ಬಾರಿ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕಿದರೆ ಸಂತಾನಪ್ರಾಪ್ತಿಯಾಗುತ್ತದೆ. 11 ಬಾರಿ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕಿದರೆ ಆಯುಷ್ಯ ವೃದ್ದಿಯಾಗುತ್ತದೆ.ದೇವಸ್ಥಾನಕ್ಕೆ 13 ಬಾರಿ ಪ್ರದಕ್ಷಿಣೆ ಹಾಕಿದರೆ ಪ್ರಾರ್ಥನೆ ಸಿದ್ದಿಯಾಗುತ್ತದೆ.15 ಬಾರಿ ಪ್ರದಕ್ಷಿಣೆ ಹಾಕುವುದರಿಂದ ಧನ ಪ್ರಾಪ್ತಿಯಾಗುತ್ತದೆ.17 ಬಾರಿ ಪ್ರದಕ್ಷಿಣೆ ಮಾಡಿದರೆ ಧನ ವೃದ್ದಿಯಾಗುತ್ತದೆ.19 ಬಾರಿ ಪ್ರದಕ್ಷಿಸಿದರೆ ರೋಗ ನಿವಾರಣೆಯಾಗುತ್ತದೆ.ದೇವಸ್ಥಾನಕ್ಕೆ ಬೆಳಗಿನ ಜಾವ ಪ್ರದಕ್ಷಿಣೆ ಹಾಕಿದರೆ ರೋಗ ನಿವಾರಣೆಯಾಗುತ್ತದೆ.ಮಧ್ಯಾಹ್ನ ಪ್ರದಕ್ಷಿಣೆ ಹಾಕಿದರೆ ಇಷ್ಟಾರ್ಥ ಸಿದ್ದಿಯಾಗುತ್ತದೆ.ಸಂಜೆ ಸಮಯದಲ್ಲಿ ಪ್ರದಕ್ಷಿಣೆ ಮಾಡುವುದರಿಂದ ಪಾಪ ದೂರವಾಗುತ್ತದೆ.ರಾತ್ರಿ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕಿದರೆ ಮೋಕ್ಷ ಸಿದ್ದಿಯಾಗುತ್ತದೆ. ದೇವರಿಗೆ ತೆಂಗಿನಕಾಯಿಯನ್ನು ಒಡೆಯುವುದರ ಉದ್ದೇಶವೇನು..?:

ಸಾಮಾನ್ಯ ಆಚರಣೆಯ ಹಿಂದಿರುವ ಅಸಾಮಾನ್ಯ ಆಧ್ಯಾತ್ಮ..!!

ಸನಾತನ ಧರ್ಮದ ಜಾಡು ಹಿಡಿದು ಹೊರಟರೆ ದೇವರನ್ನು ಬಿಟ್ಟು ಯಾವ ಆಚರಣೆಯೂ ಇಲ್ಲ ಅನ್ನುವುದಕ್ಕೆ ಇದೊಂದು ನಿದರ್ಶನ..!

ಮನುಷ್ಯನ ದೇಹದಲ್ಲಿ ಏಳು ಸಮುದ್ರಗಳಿವೆ.!

ಕ್ರಮವಾಗಿ...

1. ಉಪ್ಪು ನೀರಿನ ಸಮುದ್ರ (ಮೂತ್ರಕೋಶ)
2. ಕಬ್ಬಿನ ಹಾಲಿನ ಸಮುದ್ರ (ಜನನಾಂಗ)
3. ಕಳ್ಳು (ಮದ್ಯದ) ಸಮುದ್ರ– ಹೊಟ್ಟೆ
4. ಬೆಣ್ಣೆಯ ಸಮುದ್ರ (ಹೃದಯ–ಕೃಷ್ಣ ಕದ್ದ ನಿಜವಾದ ಭಕ್ತಿಯೆಂಬ ಬೆಣ್ಣೆ)
5. ಮೊಸರಿನ ಸಮುದ್ರ (ಗಂಟಲು)
6. ಹಾಲಿನ ಸಮುದ್ರ – (ಹುಬ್ಬುಗಳ ಮಧ್ಯೆ ಇರುವ ಜಾಗ)
7. ಅಮೃತದ ಸಮುದ್ರ – (ಮೆದುಳಿನೊಳಗೆ–ನೆತ್ತಿಯ ಹತ್ತಿರ)

ತೆಂಗಿನಕಾಯಿಗೂ ಈ ಸಮುದ್ರಗಳಿಗೂ...ಎತ್ತಣ ಮಾಮರ ಎತ್ತಣ ಕೋಗಿಲೆ ಅನ್ನುವ ಹಾಗಿದೆ ಅಲ್ಲವೇ...?

ನಮ್ಮ ದೇಹದಲ್ಲಿನ ಇಡಾ, ಪಿಂಗಳಾ ಹಾಗೂ ಸುಷುಮ್ನಾ ನಾಡಿಗಳು ಸಂಧಿಸುವ ಸ್ಥಳಗಳಿವು..!!ಅಲ್ಲೇ ನಿರ್ನಾಳ ಗ್ರಂಥಿಗಳೂ ಇವೆ.!

ಉದಾ:ಥೈಮಸ್ ಗ್ಲಾಂಡ್–ಹೃದಯದಲ್ಲಿ ಟಪಿಟ್ಯುಟರಿ ಗ್ಲಾಂಡ್–ಮೆದುಳಿನ ಮಧ್ಯಭಾಗದಲ್ಲಿ (ಅಮೃತದ ಸಮುದ್ರ)

ವಿಷಯಕ್ಕೆ ಬರೋಣ..

ದೇವರನ್ನೇ ಸೇರುವುದನ್ನು ಜೀವನದ ಗುರಿಯಾಗಿಟ್ಟು ಕೊಂಡಿದ್ದ ನಮ್ಮ ಪೂರ್ವಜರು ಇಂತಹ ಸಾಮಾನ್ಯವಾದ ಆಚರಣೆಯಲ್ಲೂ ಅಸಾಮಾನ್ಯ ಆಧ್ಯಾತ್ಮವನ್ನು ಹುದುಗಿಸಿಟ್ಟರು..!!

ತೆಂಗಿನಕಾಯಿ ಮನುಷ್ಯನ ತಲೆಯ ಭಾಗಕ್ಕೆ ಹೋಲುತ್ತದೆ.

*11ನೇ ಪುಟಕ್ಕೆ....*

# ವಿಜ್ಞಾನ ಮತ್ತು ಆಧ್ಯಾತ್ಮದ ನಡುವಿನ ಸಾಮ್ಯತೆ

ಹೆಚ್ಚಿನ ಜನರು ವಿಜ್ಞಾನ ಮತ್ತು ಆಧ್ಯಾತ್ಮಿಕತೆಯು ಸಂಪೂರ್ಣವಾಗಿ ವಿರುದ್ಧವಾದ ಅಧ್ಯಯನ ಕ್ಷೇತ್ರಗಳೆಂದು ಭಾವಿಸುತ್ತಾರೆ, ಆದರೆ ವಾಸ್ತವದಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮ ಒಂದೇ ನಾಣ್ಯದ ಎರಡು ಮುಖಗಳು. ವಿಜ್ಞಾನದ ಗುರಿ ಆಳವಾದ ಆಧ್ಯಾತ್ಮಿಕ ಸತ್ಯಗಳನ್ನು ಬಹಿರಂಗ ಪಡಿಸುವುದು, ಮತ್ತು ಆಧ್ಯಾತ್ಮಿಕತೆಯ ಗುರಿ ವೈಜ್ಞಾನಿಕ ಸತ್ಯದ ಹಿಂದಿನ ಕಾರಣವನ್ನು ಹುಡುಕುವುದು. ವಿಜ್ಞಾನವನ್ನು ತಮ್ಮ ಕ್ಷೇತ್ರವನ್ನಾಗಿ ಆರಿಸಿಕೊಂಡಿರುವ ಭೌತಿಕ ವಿಜ್ಞಾನಿಗಳು ಆಧ್ಯಾತ್ಮಿಕ ಹುಡುಕಾಟದಲ್ಲಿ ತೊಡಗಿರುವ ಆಧ್ಯಾತ್ಮಿಕ ವಿಜ್ಞಾನಿಗಳಿಗಿಂತ ಹೆಚ್ಚು ಭಿನ್ನವಾಗಿಲ್ಲ. ಇಬ್ಬರೂ ಒಂದೇ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಿರುತ್ತಾರೆ. ಆದರೆ ವಿಭಿನ್ನ ರೀತಿಯಲ್ಲಿ ನಿಸರ್ಗದ ಗುಪ್ತ ನಿಯಮಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಎಲ್ಲವನ್ನೂ ಸೃಷ್ಟಿಸಿದ ಉನ್ನತ ಶಕಿಯ ಅನ್ವೇಷಣೆ ಮತ್ತು ಇತರರ ಜೀವನವನ್ನು ಉತ್ತಮಗೊಳಿಸುವುದಕ್ಕಾಗಿ ತಮ್ಮ ಸಂಶೋಧನೆಗಳನ್ನು ಬಳಸುತ್ತಾರೆ.



ಭಾತಿಕ ವಿಜ್ಞಾನಿಗಳು ಹೊರಗಿನ ಕಣ್ಣು ಮತ್ತು ಕಿವಿಗಳ ಮೂಲಕ ಸೃಷ್ಠಿಯ ಅಸ್ಥಿತ್ವವನ್ನು ಸಾಬೀತು ಪಡಿಸಲು ಪ್ರಯತ್ನಿಸುತ್ತಿದ್ದರೆ ಆಧ್ಯಾತ್ಮಿಕ ವಿಜ್ಞಾನಿಗಳು ತಮ್ಮ ಒಳಗಿನ ಕಣ್ಣು ಮತ್ತು ಕಿವಿಗಳ ಮೂಲಕ ಸೃಷ್ಠಿಯ ಅಸ್ಥಿತ್ವವನು ಸಾಬೀತು ಪಡಿಸಲು ಪ್ರಯತ್ನಿಸುತ್ತಿರುತ್ತಾರೆ. ಭೌತಿಕ ವಿಜ್ಞಾನಿಗಳು ಶಕ್ತಿಯುತ ದೂರದರ್ಶಕಗಳ ಮೂಲಕ ನಕ್ಷತ್ರಗಳನ್ನು ನೋಡಿದರೆ ಆಧ್ಯಾತ್ಮಿಕ ವಿಜ್ಞಾನಿಗಳು ಧ್ಯಾನದ ಮೂಲಕ ನಕ್ಷತ್ರಗಳನ್ನು ನೋಡುತ್ತಾರೆ. ನೋಡುವ ವಿಧಾನ ಬದಲಾದರು ನೋಟದ ವಿಷಯ ಒಂದೇ ಆಗಿರುತ್ತದೆ.

ನಮ್ಮನ್ನು ಸೃಷ್ಟಿಗೆ ತಂದ ಶಕ್ತಿಯ ಅಸ್ತಿತ್ವವನ್ನು ಸಾಬೀತು ಪಡಿಸುವ ಬಯಕೆ ಮಾನವರಲ್ಲಿ ಅಡಗಿದೆ.. ಭೌತಿಕ ಹಾಗೂ ಆಧ್ಯಾತ್ಮಿಕ ವಿಜ್ಞಾನದ ಎರಡೂ ರೂಪ ಈ ಅಸ್ತಿತ್ವದ ಅನ್ವೇಷಣೆಯ ಭಾಗವಾಗಿದೆ. ಭೌತಿಕ ವಿಜ್ಞಾನಿಗಳು ಹೊರ ಸಲಕರಣೆಗಳ ಮೂಲಕ ಹುಡುಕುತ್ತಿದ್ದಾರೆ, ಆಧ್ಯಾತ್ಮಿಕ ವಿಜ್ಞಾನಿಗಳು ಧ್ಯಾನವೆಂಬ ಆಂತರಿಕ ಉಪಕರಣದ ಮೂಲಕ ಹುಡುಕುತ್ತಾರೆ. ವೈಜ್ಞಾನಿಕ ವಿಧಾನದಲ್ಲಿ ನಾವು ಒಂದು ಊಹೆಯನ್ನು ಪರೀಕ್ಷಿಸುತ್ತೇವೆ ಮತ್ತು ಎಚ್ಚರಿಕೆಯಿಂದ ಅವಲೋಕನಗಳನ್ನು ಮಾಡುತ್ತೇವೆ. ಈ ವೈಜ್ಞಾನಿಕ ವಿಧಾನವು ಆಧ್ಯಾತ್ಮಿಕ ಅನುಭವಗಳ ಸಿಂಧುತ್ವವನ್ನು ಸಾಬೀತು ಪಡಿಸಲು ಸಹಾಯಮಾಡುತ್ತವೆ. ಧ್ಯಾನವು ಒಂದು ಮಟ್ಟದ ಅಂತಃಪ್ರಜ್ಞೆಯಿಂದ ವೈಜ್ಞಾನಿಕ ಸತ್ಯಗಳನ್ನು ಬಹಿರಂಗ ಪಡಿಸಲು ನಮಗೆ ಸ್ಪೂರ್ತಿಯನ್ನು ನೀಡುತ್ತದೆ. ಕೆಲವು ಶ್ರೇಷ್ಠ ವಿಜ್ಞಾನಿಗಳು ತಮ್ಮ ಸಂಶೋಧನೆಗಳ ಬಗ್ಗೆ ಪ್ರಶ್ನಿಸಿದಾಗ ಆಧ್ಯಾತ್ಮಿಕ ಸ್ಪೂರ್ತಿ ಅಥವಾ ದೈವಿಕ ಶಕ್ತಿಯನ್ನು ಅವರ ಸಂಶೋಧನೆಗಳ ಹಿಂದಿನ ಶಕ್ತಿ ಎಂದು ಹೇಳುತ್ತಾರೆ. ಸಾಪೇಕ್ಷ ಸಿದ್ಧಾಂತವನ್ನು ಬಹಿರಂಗಪಡಿಸಿದ ಆಲ್ಬರ್ಟ್ ಐನ್‌ಸ್ಟೈನ್ ಒಮ್ಮೆ ತಮ್ಮಹೇಳಿಕೆಯಲ್ಲಿ "ವೈಜ್ಞಾನಿಕ ಸಂಶೋಧನೆಯ ಹಿಂದೆ ಬ್ರಹ್ಮಾಂಡದ ಧಾರ್ಮಿಕ ಅನುಭವವು ಪ್ರಭಲ ಮತ್ತು ಶ್ರೇಷ್ಠ ಚಾಲನ ಶಕ್ತಿಯಾಗಿದೆ" ಎಂದು ನಾನು ಪ್ರತಿಪಾದಿಸುತ್ತೇನೆ ಎಂದು ಹೇಳುತ್ತಾರೆ.

ನಾವು ಕಾಯಿಲೆಯನ್ನು ಗುಣಪಡಿಸಲು ಆಧುನಿಕ

ಔಷಧವನ್ನು ಒಂದು ವಿಧಾನವಾಗಿ ಕಂಡುಕೊಡಿದ್ದೇವೆ, ಕೇವಲ ಆಧುನಿಕ ಔಷಧ ವಿಧಾನದಿಂದ ಕಾಯಿಲೆಗಳನ್ನು ಗುಣಪಡಿಸಲು ಸಾಧ್ಯವಿಲ್ಲ ಅದಕ್ಕೆ ಆಧ್ಯಾತ್ಮಿಕ ಸಂಪರ್ಕವು ಬೇಕೆಂದು ಪ್ರತಿಪಾದಿಸುವವರಿದ್ದಾರೆ. ಪ್ರಪಂಚದ ಕೆಲವು ಶ್ರೇಷ್ಠ ವೈದ್ಯಕೀಯ ಸಂಸ್ಥೆಗಳಲ್ಲಿ

ಸೇವೆಸಲ್ಲಿಸುತ್ತಿರುವ ವೈದ್ಯರುಗಳು ತಮ್ಮ ಒತ್ತಡವನ್ನು ಕಡಿಮೆಮಾಡಲು ಮತ್ತು ಒತ್ತಡ ಸಂಬಂಧಿತ ಕಾಯಿಲೆಗಳನ್ನು ತೊಡೆದುಹಾಕಲು ಒಂದು ಮಾರ್ಗವಾಗಿ ಧ್ಯಾನವನ್ನು ಪ್ರತಿಪಾದಿಸುತ್ತಾರೆ. ರೋಗಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಿದಾಗ ಧ್ಯಾನದಲ್ಲಿ ತನ್ನ ಸಮಯವನ್ನು ಕಳೆಯುವ ವ್ಯಕ್ತಿಯು ಧ್ಯಾನವನ್ನು ಮಾಡದ ವ್ಯಕ್ತಿಗಿಂತ ಬೇಗನೆ ಚೇತರಿಸಿಕೊಳ್ಳುತ್ತಾನೆ ಎಂದು ಅಧ್ಯಯನಗಳು ಹೇಳುತ್ತವೆ.

ವಿಜ್ಞಾನ ಮತ್ತು ಆಧ್ಯಾತ್ಮಿಕತೆಯು ಗೆರೆಗಳೆರಡು ಸಮಾನಾಂತರವಾಗಿರುವ ಅದ್ಭುತ ಯುಗದಲ್ಲಿ ನಾವು ಜೀವಿಸುತ್ತಿದ್ದೇವೆ. ಪ್ರತಿಯೊಬ್ಬ ವ್ಯಕ್ತಿಯು ತಾನೆ ಸ್ವತಃ ವಿಜ್ಞಾನಿಯಾಗಿ ಧ್ಯಾನದ ಶಕ್ತಿಯನ್ನು ಪರೀಕ್ಷಿಸಬಹುದು ಮತ್ತು ಅದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತದೆ ಎಂದು ನೋಡಬಹುದು. ಧ್ಯಾನ ಮಾಡಲು ಅನುಕೂಲಕರವಾಗಿರುವ ಯಾವುದೇ ಜಾಗದಲ್ಲಿ ಯಾವುದೇ ಭಂಗಿಯಲ್ಲಿ ಕಣ್ಣುಮುಚ್ಚಿ ಕುಳಿತು ಕತ್ತಲೆಯ ನಡುವೆ ಕಾಣುವ ಒಂದು ಪುಟ್ಟ ಬೆಳಕಿನ ಬಿಂದುವನ್ನು ಕಾಣಬಹುದು. ಅಂದರೆ ಯಾವರೀತಿಯಲ್ಲಿ ನಾವು ಸೂಕ್ಷ್ಮದರ್ಶಕ ಅಥವಾ ದೂರದರ್ಶಕದ ಮೂಲಕ ನಮ್ಮ ಗಮನವನ್ನು ಕೇಂದ್ರಿಕರಿಸಿ ಒಂದು ಸ್ಥಿರವಾದ ಬಿಂದುವನ್ನು ನೋಡುತ್ತೇವೋ ಅದೇರೀತಿ ಧ್ಯಾನದಲ್ಲೂ ಸಹ ನೋಡಬಹುದು.

ಈ ಮೇಲಿನ ಎಲ್ಲಾ ವಿಚಾರಗಳನ್ನು ಅವಲೋಕಿಸಿ ನೋಡಿದಾಗ ವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ಅನ್ವೇಷಣೆಗೆಳೆರಡು ಒಂದೇ ನಾಣ್ಯದ ಎರಡು ಮುಖಗಳು ಎಂದು ತಿಳಿಯಬಹುದು. ಅನ್ವೇಷಣೆಯ ದಾರಿ ಬೇರೆಬೇರೆ ಆಗಿರುತ್ತದೆ ಆದರೆ ಅಂತಿಮ ಗುರಿ ಒಂದೇ, ಅದು ಈ ಸೃಷ್ಟಿಯ ನಿಗೂಢ ರಹಸ್ಯವನ್ನು ತಿಳಿಯುವುದು.

**–ವಿಜಯ್ ಕುಮಾರ್**
ಅಭಿನವ ಭಾರತಿ ಕಾಲೇಜ್ ಆಫ್ ಫಾರ್ಮಸಿ

# ಸಂಪ್ರದಾಯದ ಮೂಲ ನೆಲೆ

*...9ನೇ ಪುಟದಿಂದ*

ಮನುಷ್ಯ ಸಾಯುವಾಗ (ಹೌದು, ಸಾವಿಗೂ ತೆಂಗಿನಕಾಯಿಗೂ ಅವಿನಾಭಾವ ಸಂಬಂಧವಿದೆ.!) ಪ್ರಾಣ ಶರೀರದ ಯಾವ ಭಾಗದಿಂದ ಬೇಕಾದರೂ ಹೋಗಬಹುದು.ಉದಾ::ಕಣ್ಣು ಬಿಟ್ಟು, ಬಾಯಿ ತೆಗೆದು ಅಥವಾ ಮಲಮೂತ್ರ ದ್ವಾರಗಳಿಂದಲೂ ಸಹ.!

ಪ್ರಾಣ ಊರ್ಧ್ವಮುಖವಾಗಿ ಹೋಗಿ ಬ್ರಹ್ಮರಂಧ್ರದ (ನೆತ್ತಿಯ ಭಾಗ) ಮೂಲಕ ಹೋದರೆ ಅವನಿಗೆ ಪುನಃ ಹುಟ್ಟಿಲ್ಲ..!! ಅದೇ ಅಮೃತದ ಸಮುದ್ರ.!ಅಂತಹ ಜೀವ ಶಾಶ್ವತವಾಗಿ ಪರಮಾತ್ಮನನ್ನು ಸೇರುತ್ತದೆ.

ಒಮ್ಮೆ ಒಡೆದ ತೆಂಗಿನಕಾಯಿ ಮತ್ತೆ ಹುಟ್ಟಿದ್ದುಂಟೇ.!?

ತೆಂಗಿನ ಕಾಯಿ ಒಡೆಯುವಾಗ...

"ನನ್ನ ಪ್ರಾಣ ಅದರಂತೆಯೇ ಬ್ರಹ್ಮರಂಧ್ರದಿಂದ ಊರ್ಧ್ವಮುಖವಾಗಿ ಹೋಗಲಿ ಎನ್ನುವುದೇ ತೆಂಗನ್ನು ಒಡೆಯುವುದರ ಹಿಂದಿನ ಮರ್ಮ..!! ಇಷ್ಟು ಬೇಡಿಕೊಂಡೇ ಒಡೆಯಬೇಕು..!!"

ಇಲ್ಲದಿದ್ದರೆ ಚಟ್ನಿಗೋ... ವಡೆಗೋ...ಪಾಯಸಕ್ಕೋ... ಕೆಟ್ಟರೆ ದೇವರಿಗೋ..!!

ಇನ್ನೂ ಒಂದು ಅನುಸಂಧಾನವಿದೆ...!

ನಮಗೆ ಸ್ಥೂಲ ಶರೀರ, ಸೂಕ್ಷ್ಮ ಶರೀರ ಹಾಗೂ ಲಿಂಗ ಶರೀರಗಳಿವೆ..!

ತೆಂಗಿನಕಾಯಿಯ ಹೊರಭಾಗ (ಸಿಪ್ಪೆ, ನಾರು ಇತ್ಯಾದಿ) ಸ್ಥೂಲ ಶರೀರದಂತೆ..ಬಿದ್ದು ಹೋಗುವುದು.

ಸೂಕ್ಷ್ಮ ಶರೀರ(ಎಲೆಕ್ಟ್ರಿಕಲ್ ಶರೀರ ಅನ್ನಬಹುದು)

ಇದು ಅದರ ಚರಟ, ಪೊರಟೆ–ಪ್ರಯತ್ನದಿಂದ ಒಡೆಯಬೇಕು.!

ಮೂರನೆಯದು ಲಿಂಗ ಶರೀರ...ಒಂಥರ ಕೊಬ್ಬರಿ ಇದ್ದ ಹಾಗೆ..!!

ಒಳಗಿರುವುದೇ ಅಮೃತತ್ವ.

ಒಂದು ಜೀವಿ ಮೋಕ್ಷ ಸಾಧಿಸುವುದೆಂದರೆ ಈ ಮೂರೂ ಶರೀರಗಳನ್ನು ನಾಶಪಡಿಸಿಕೊಳ್ಳಬೇಕು..!!

ಇಷ್ಟು ಅನುಸಂಧಾನವಿಟ್ಟುಕೊಂಡೇ ತೆಂಗಿನಕಾಯಿಯನ್ನು ಒಡೆಯಬೇಕು..!!

**–ಸಂಗ್ರಹ**

# ಮೂಢನಂಬಿಕೆಯಲ್ಲ ಈ ಹಿಂದೂ ಆಚರಣೆಗಳು, ಇದರ ಬೆನ್ನಿಗಿದೆ ವಿಜ್ಞಾನ!

ಹಿಂದೂ ಧರ್ಮವು ಒಂದು ನಿಗೂಢವಾದ ಧರ್ಮವಾಗಿದೆ, ಇದು ಆದಿ ಅಂತ್ಯಗಳಿಲ್ಲದ ಸನಾತನ ಧರ್ಮ. ಇದರಲ್ಲಿ ಅಸಂಖ್ಯಾತ ರೀತಿ ನೀತಿಗಳು, ಸಂಪ್ರದಾಯಗಳು ಮತ್ತು ಕಟ್ಟುಪಾಡುಗಳು ಈ ಧರ್ಮದ ಬೆನ್ನೆಲುಬಾಗಿ ಕೆಲಸ ಮಾಡುತ್ತಿವೆ. ಆದರ ನಮ್ಮಲ್ಲಿ ಅನೇಕರಿಗೆ ಆಧುನಿಕ ಯುಗದಲ್ಲಿ ಈ ಸಂಪ್ರದಾಯ ಮತ್ತು ಕಟ್ಟುಪಾಡುಗಳ ಅವಶ್ಯಕತೆ ಏನು ಮತ್ತು ಏಕೆ ಎಂಬ ಪ್ರಶ್ನೆಗಳು ಕಾಡುತ್ತಿವೆ. ಇನ್ನೂ ಕೆಲವರು ಈ ನಂಬಿಕೆ ಮತ್ತು ಆಚರಣೆಗಳನ್ನು ಮೂಢನಂಬಿಕೆ ಗಳೆಂದು ಪರಿಗಣಿಸಿ ಆಧುನಿಕ ಯುಗದಲ್ಲಿ ಇವುಗಳ ಅಸ್ಥಿತ್ವ ಬೇಕಿಲ್ಲ ಎಂದು ವಾದಿಸುತ್ತಾರೆ. ಹಿಂದೂಗಳು ಏನು ಮಾಡಿದರೂ ಅವನ್ನು ಮೂಢನಂಬಿಕೆ ಎನ್ನುವುದು ಕೆಲವರಿಗೆ ಅಭ್ಯಾಸ. ಆದರೆ, ಬಹುತೇಕ ಪದ್ಧತಿ, ಆಚರಣೆಗಳ ಹಿಂದೆ ಸದುದ್ದೇಶವಿದೆ, ವಿಜ್ಞಾನ ಕೂಡಾ ಇದೆ. ಆದರೆ, ದೇವರು, ಧರ್ಮದ ಹೆಸರಿನಲ್ಲಿ ಹೇಳಿದಾಗ ಮಾತ್ರ ಹೆಚ್ಚಿನ ಜನರು ಶ್ರದ್ಧಾ ಭಕ್ತಿಯಿಂದ ಅದನ್ನು ಆಚರಿಸುತ್ತಾರೆ ಎಂದು ಅವುಗಳನ್ನು ಆಚರಣೆಗಳ ಕಟ್ಟಳೆಯಾಗಿಸಲಾಗಿದೆ. ವಿಜ್ಞಾನ ಮುಂದುವರಿದಂತೆಲ್ಲ ಈ ಸಂಪ್ರದಾಯಗಳ ಹಿಂದಿನ ವೈಜ್ಞಾನಿಕ ವಿವರಣೆ ದೊರೆಯುತ್ತ ಹೋಗುತ್ತಿದೆ. ಈ ವೈಜ್ಞಾನಿಕ ಜ್ಞಾನವನ್ನೇ ಸಂಪ್ರದಾಯದ ಹೆಸರಿನಲ್ಲಿ ತಲೆಮಾರಿನಿಂದ ತಲೆಮಾರಿಗೆ ಹರಿಯಬಿಡಲಾಗಿದೆ. ಸಾಮಾನ್ಯ ಜನರಿಗೆ ಈ ಆಚರಣೆಗಳ ಹಿಂದಿನ ವಿಜ್ಞಾನದ ಅರಿವು ಇಲ್ಲವಾದರೂ, ಅವರಿದನ್ನು ನಂಬಿಕೆಯ ತಳಹದಿ ಮೇಲೆ ಸಾವಿರಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಇದನ್ನು ಆಚರಿಸುತ್ತಿರುವವರೂ ಸಹಾ ಇದರ ಮಹತ್ವವನ್ನು ಅರಿಯದೇ ಒಂದು ಗೊಡ್ಡು ಸಂಪ್ರದಾಯದಂತೆ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಆದರೆ ಈ ವಿಧಿಗಳು ಕೇವಲ ಮೂಢನಂಬಿಕೆಯೇ. ಈ ಪ್ರಶ್ನೆಯನ್ನು ವಿಜ್ಞಾನಿಗಳಿಗೆ ಕೇಳಿದರೆ ವೈಜ್ಞಾನಿಕವಾಗಿ ಮಹತ್ವ ಪಡೆದಿರುವ ವಿಧಿಗಳ ಬಗ್ಗೆ ತಿಳಿಸುತ್ತಾರೆಯೇ ಹೊರತು ತಮ್ಮ ಸ್ವಾರ್ಥಸಾಧನೆಗಾಗಿ ಕೆಲವರು ಇಲ್ಲದ ವಿಧಿಗಳನ್ನು ಹುಟ್ಟಿಸಿದ್ದುದನ್ನಲ್ಲ.

**ಅಂಥ ಕೆಲವು ಆಚರಣೆಗಳು ಹಾಗೂ ಸಂಪ್ರದಾಯಗಳ ಹಿಂದಿನ ವೈಜ್ಞಾನಿಕ ವಿವರಣೆಗಳು.**

### –ಗ್ರಹಣದ ಬಗ್ಗೆ ಭಯ

ಗ್ರಹಣದ ಸಮಯದಲ್ಲಿ ಹಿಂದೂ ಸಂಪ್ರದಾಯದ ಮನೆಗಳಲ್ಲಿ ಯಾರಿಗೂ ಮನೆಯಿಂದ ಹೊರಹೋಗುವ ಅವಕಾಶವಿಲ್ಲ. ಅಷ್ಟೇ ಅಲ್ಲ, ಬರಿಗಣ್ಣಿನಿಂದನೋಡಲೂ ಅವಕಾಶವಿಲ್ಲ. ಅದರಲ್ಲೂ ಗರ್ಭಿಣಿಯರು ಮನೆಯೊಳಗೇ, ಸೂರ್ಯನ ಬೆಳಕೂ ಬೀಳದಂತಹ ಸ್ಥಳದಲ್ಲಿರಬೇಕು. ಏಕೆಂದರೆ ಗ್ರಹಣದ ಬಿಸಿಲು ಮಗುವಿನ ಬೆಳವಣಿಗೆಗೆ ಅಡ್ಡಿಯಾಗಬಹುದು. ಈ ಸಮಯದಲ್ಲಿ ಅಡುಗೆ ಮಾಡುವುದು, ಆಹಾರ ಸೇವಿಸುವುದೂ ನಿಷಿದ್ಧ . ಕೆಲವು ಕಡೆಗಳಲ್ಲಿ ಪ್ರತಿ ಆಹಾರದ ಪಾತ್ರೆಯ ಮೇಲೆ ತುಳಸಿ ಎಲೆಗಳನ್ನು ಇಡಲಾಗುತ್ತದೆ. ಇಂದು ವಿಜ್ಞಾನ ಗ್ರಹಣದ ಸಮಯದಲ್ಲಿ ಎದುರಾಗುವ ಸೂರ್ಯನ ಕಿರಣ ಇತರ ಸಮಯದಲ್ಲಿ ಇರದಿದ್ದ ಅಗೋಚರ ಕಿರಣಗಳನ್ನು ಬೀಳುವಂತೆ ಮಾಡಿ ಆರೋಗ್ಯ, ಆಹಾರವನ್ನು ಹಾಳುಮಾಡಬಹುದು ಎಂದು ಸಾಬೀತು ಪಡಿಸಿದೆ.

### ಉತ್ತರದ ಕಡೆ ತಲೆ ಹಾಕಿ ಮಲಗಬೇಡಿ

ಹಿಂದೂ ಧರ್ಮದ ಪ್ರಕಾರ ಉತ್ತರ ದಿಕ್ಕು ಎಂದರೆ ಭೂತದ ಕಡೆಯಾಗಿದ್ದು ಈ ಕಡೆಗೆ ತಲೆ ಹಾಕಿ ಮಲಗಬಾರದು. ವಾಸ್ತವವಾಗಿ

ನಮ್ಮ ದೇಹದಲ್ಲಿಯೂ ಆಯಸ್ಕಾಂತೀಯ ಅಂಶವಿದ್ದು ಭೂಮಿಯ ಆಯಸ್ಕಾಂತೀಯ ಶಕ್ತಿಯೊಂದಿಗೆ ಮಿಲನಗೊಳ್ಳಬಹುದು. ದೇಹದ ಆಯಸ್ಕಾಂತದ ಪ್ರಕಾರ ತಲೆಯಲ್ಲಿ ಉತ್ತರಭಾಗವಿದೆ. ಈಗ ಉತ್ತರ ಮತ್ತು ಉತ್ತರ ಆಯಸ್ಕಾಂತೀಯ ಶಕ್ತಿಗಳು ಎದುರಾದರೆ ಪರಸ್ಪರ ವಿರರ್ಷಿತಗೊಳ್ಳುತ್ತವೆ. ಇದು ರಕ್ತಸಂಚಾರಕ್ಕೆ ಅಡ್ಡಿಯಾಗುತ್ತದೆ.

### ರಾತ್ರಿ ಹೊತ್ತು ಅರಳಿ ಮರದ ವಾಯು ಸೇವನೆ

ರಾತ್ರಿ ಹೊತ್ತು ಅರಳಿ ಮರದ ಕೆಳಗೆ ಮಲಗಿದರೆ ಭೂತಗಳು ಆವರಿಸುತ್ತವೆ ಎಂದು ಪುರಾಣಗಳಲ್ಲಿ ತಿಳಿಸಲಾಗಿದೆ. ಆದರೆ ವಾಸ್ತವವಾಗಿ ಅರಳಿ ಮರ ಬಿಡಿ, ಯಾವುದೇ ಮರದ ಕೆಳಗೆ ಮಲಗಿದರೂ ರಾತ್ರಿಹೊತ್ತು ಸಸ್ಯಗಳು ದ್ಯುತಿಸಂಶ್ಲೇಷಣೆಯ ವಿರುದ್ಧ ಕ್ರಿಯೆ ಅಂದರೆ ಆಮ್ಲಜನಕವನ್ನು ಪಡೆದು ಇಂಗಾಲದ ಡೈ ಆಕ್ಸೈಡ್ ಅನಿಲವನ್ನು ಬಿಡುಗಡೆ ಮಾಡುತ್ತವೆ. ರಾತ್ರಿ ಹೊತ್ತು ಅರಳಿ ಮರದ ಕೆಳಗೆ ಮಲಗಬಾರದು ಇದು ನಮಗೆ ವಿಷಾನಿಲವಾಗಿದ್ದು ರಾತ್ರಿ ಮರದ ಕೆಳಗೆ ಮಲಗಿದವರ ಉಸಿರಿನ ಮೂಲಕ ಮೆದುಳಿಗೆ ತಲುಪಿದಾಗ ಮೆದುಳಿನಲ್ಲಿ

ಚಿತ್ರವಿಚಿತ್ರ ಅನುಭವಗಳಾಗುತ್ತದೆ.

### ಲಿಂಬೆ ಮತ್ತು ಹಸಿಮೆಣಸಿನ ಹಾರ

ಹೊಸ ವಾಹನ, ಮನೆ, ಆಸ್ತಿಗಳಿಗೆ ಲಿಂಬೆಹಣ್ಣು ಮತ್ತು ಮೆಣಸಿನ ಹಾರವನ್ನು ಪೋಣಿಸಿ ಹಾಕಲಾಗುತ್ತದೆ. ಇದರಿಂದ ಕೆಟ್ಟ ದೃಷ್ಟಿಯನ್ನು ತಡೆದಂತಾಗುತ್ತದೆ ಎಂದು ಹಿಂದೂ ಧರ್ಮ ತಿಳಿಸುತ್ತದೆ. ವಾಸ್ತವವಾಗಿ ಲಿಂಬೆ ಮತ್ತು ಮೆಣಸು ಎರಡ ರಲ್ಲಿಯೂ ಅತ್ಯುತ್ತಮ ಔಷಧೀಯ ಗುಣಗಳಿದ್ದು ಇವುಗಳನ್ನು ಹೆಚ್ಚು ಹೆಚ್ಚಾಗಿ ಬಳಸಲು ಪ್ರೇರಣೆ ನೀಡಲೆಂದೇ ನಮ್ಮ ಹಿರಿಯರು ಈ ವ್ಯವಸ್ಥೆಯನ್ನು ಪ್ರಾರಂಭಿಸಿದ್ದಿರಬಹುದು.

### ಮೊಸರು ಮತ್ತು ಜೇನು ಅಥವಾ ಸಕ್ಕರೆ ತಿನ್ನಿಸುವುದು

ಸಾಮಾನ್ಯವಾಗಿ ಮನೆಯ ಹೊಸ್ತಿಲನ್ನುತುಳಿದು ಹೊರಗೆ ಹೋಗುವ ಮುನ್ನ ವ್ಯಕ್ತಿಗೆ ಕೊಂಚ ಮೊಸರು ಮತ್ತು ಜೇನು ಅಥವಾ ಸಕ್ಕರೆ ತಿನ್ನಿಸುವುದು ವಾಡಿಕೆ. ಇದರಿಂದ ಹೋಗಲಿರುವ ಕೆಲಸ ಶುಭವಾಗುತ್ತದೆ ಎಂದು ಹಿಂದೂಗಳು ನಂಬುತ್ತಾರೆ. ವಾಸ್ತವವಾಗಿ ಮೊಸರಿನಲ್ಲಿರುವ ಕ್ಯಾಲ್ಸಿಯಂ, ಪ್ರೋಟೀನುಗಳು ಮತ್ತು ಕೊಂಚ ಸಕ್ಕರೆ ಇದ್ದರೆ ಜೀರ್ಣಕ್ರಿಯೆ ಸುಲಭಗೊಳ್ಳುತ್ತದೆ. ಇದರಿಂದ ಮುಂದಿನ ಪ್ರಯಾಣಕ್ಕೆ ಅಗತ್ಯವಾದ ಶಕ್ತಿ ಲಭ್ಯವಾಗುತ್ತದೆ. ಅಲ್ಲದೇ ಇದರ ಪೋಷಕಾಂಶಗಳು ಜೀರ್ಣಕ್ರಿಯೆಯನ್ನು ಉತ್ತಮಗೊಳಿಸುತ್ತದೆ.

### ಶವಸಂಸ್ಕಾರ

ಸ್ಮಶಾನಕ್ಕೆ ಹೋಗಿ ಬಂದ ಬಳಿಕ ಅಲ್ಲಿನ ಆತ್ಮಗಳು ಅಲ್ಲಿದ್ದವರನ್ನು ಆವರಿಸಿಕೊಳ್ಳುತ್ತವೆ ಎಂದು ಹಿಂದೂಗಳು ನಂಬುತ್ತಾರೆ. ವಾಸ್ತವವಾಗಿ ಸ್ಮಶಾನದಲ್ಲಿ ಮೃತಶರೀರಗಳು ಕೊಳೆಯುವ ಅಥವಾ ಸುಟ್ಟ ಬಳಿಕ ಉಳಿಯುವ ಭಾಗದಲ್ಲಿ ಬ್ಯಾಕ್ಟೀರಿಯಾಗಳು ಅತಿ ಹೆಚ್ಚಾಗಿ ಬೆಳೆದುಬಿಡುತ್ತವೆ. ಇದು ಸ್ಮಶಾನಕ್ಕೆ ಆಗಮಿಸಿದರವನ್ನು ಸುಲಭವಾಗಿ ಆವರಿಸುತ್ತವೆ. ಆದ್ದರಿಂದ ಸ್ಮಶಾನದಿಂದ ಹಿಂದಿರುಗಿದ ವ್ಯಕ್ತಿಗಳು ಯಾರನ್ನೂ ಭೇಟಿಯಾಗುವ ಮುನ್ನ ಅಥವಾ ಮುಟ್ಟುವ ಮುನ್ನ ಸ್ನಾನ ಮಾಡುವುದು ನೈರ್ಮಲ್ಯದ ದೃಷ್ಟಿಯಿಂದಲೂ ಅಗತ್ಯವಾದ ಕ್ರಮವಾಗಿದೆ.

### ನಾಣ್ಯಗಳನ್ನು ನದಿಗೆಸೆಯುವುದು

ನಾಣ್ಯಗಳನ್ನು ದೇವಸ್ಥಾನದ ಸಮೀಪದ ಕಲ್ಯಾಣಿಗೆ, ಕೆರೆಗೆ, ನದಿಗೆ ಎಸೆಯುವುದರಿಂದ ಅದೃಷ್ಟ ಒಲಿಯುತ್ತದೆ ಎಂಬ ನಂಬಿಕೆ ಇದೆ. ಇದೇ ನಂಬಿಕೆ ಮೇಲೆ ಈಗಲೂ ಹಲವರು ಹೀಗೆ ನಾಣ್ಯಗಳನ್ನು ಕಲ್ಯಾಣಿಗೆಸೆಯುವುದನ್ನು ಕಾಣಬಹುದು. ಆದರೆ, ಹೀಗೆ ಸಾವಿರಾರು ಕೈಗಳನ್ನು ದಾಟಿ ಬ್ಯಾಕ್ಟೀರಿಯಾಗಳ ಆಗರವಾಗಿರುವ ನಾಣ್ಯಗಳನ್ನು ನೀರಿಗೆಸೆದು, ನೀರನ್ನು ಮಲಿನಗೊಳಿಸಲಾಗುತ್ತಿದೆ ಎಂಬ ಆರೋಪ ಇದಕ್ಕಿದೆ. ಆದರೆ, ಈ ಅಭ್ಯಾಸ ಶುರುವಾದದ್ದು ಹೀಗಲ್ಲ, ಹಿಂದಿನ ಕಾಲದಲ್ಲಿ ತಾಮ್ರದ ನಾಣ್ಯಗಳನ್ನು ಬಳಸಲಾಗುತ್ತಿತ್ತು. ಈ ಕಾಪರ್ ಮನುಷ್ಯನ ದೇಹಕ್ಕೆ ಬಹಳಷ್ಟು ಆರೋಗ್ಯ ಲಾಭಗಳನ್ನು ತಂದುಕೊಡುತ್ತದೆ. ಅದೇ ಕಾರಣಕ್ಕೆ ಈಗೀಗ ಎಲ್ಲರೂ ಕಾಪರ್ ಬಾಟಲ್, ಲೋಟಗಳನ್ನು ಬಳಸುವುದು ಟ್ರೆಂಡ್ ಕೂಡಾ ಆಗಿದೆ. ಹೀಗೆ ಕಾಪರ್ ನಾಣ್ಯಗಳನ್ನು ನೀರಿಗೆ ಹಾಕಿ, ನಂತರದಲ್ಲಿ ಆ ನೀರಿನ ಸೇವನೆಯಿಂದ ಮನುಷ್ಯನ ದೇಹಕ್ಕೆ ಅಗತ್ಯವಿರುವಷ್ಟು ಕಾಪರ್ ಸೇರಿಸುವುದು ಹಿರಿಯರ ಉದ್ದೇಶವಾಗಿತ್ತು. ಆಗ ನದಿಯ ನೀರು ಮಾತ್ರ ಕುಡಿಯುವ ನೀರಿನ ಮೂಲವಾಗಿತ್ತು. ಇದನ್ನು ದೇವರ ಹೆಸರಿನಲ್ಲೊಂದು ಆಚರಣೆಯಾಗಿಸಿದರೆ, ಎಲ್ಲರೂ ಈ ಮಾರ್ಗ ಅನುಸರಿಸುತ್ತಾರೆ, ಎಲ್ಲರಿಗೂ ಅಗತ್ಯವಾದ ಕಾಪರ್ ದೊರೆಯುತ್ತದೆ ಎಂಬುದು ಈ ಆಚರಣೆ ಹಿಂದಿನ ಉದ್ದೇಶ. ಆದರೆ ಇಂದಿನ ಪರಿಸ್ಥಿತಿಗೆ ಅದು ಮೂಢನಂಬಿಕೆಯಾಗಿ ನಮಗೆ ಗೋಚರಿಸುತ್ತದೆ.

### ಕಾಲುಂಗುರ ಧರಿಸುವುದು

ಹೆಂಗಸಿಗೆ ಮದುವೆಯಾಗಿದೆ ಎಂಬುದನ್ನು ಸೂಚಿಸಲು ಆಕೆ ಕಾಲುಂಗುರ ಧರಿಸಬೇಕೆಂದು ನಾವು ನಂಬಿದ್ದೇವೆ. ಆದರೆ ಈ ಆಚರಣೆ ಜಾರಿಗೆ ತಂದ ಹಿಂದೆ ಬೇರೆ ಸದುದ್ದೇಶವಿದೆ. ಸಾಮಾನ್ಯವಾಗಿ ಕಾಲುಂಗುರವನ್ನು ಮಹಿಳೆಯರು ಎರಡನೇ ಬೆರಳಿಗೆ ಧರಿಸುತ್ತಾರೆ. ಈ ಬೆರಳಿನಲ್ಲಿರುವ ನರತಂತುಗಳು ಗರ್ಭಕೋಶ ಹಾಗೂ ಹೃದಯಕ್ಕೆ ಸಂಪರ್ಕ ಹೊಂದಿರುತ್ತವೆ. ಹಾಗಾಗಿ, ಈ ಬೆರಳಿಗೆ ಉಂಗುರ ತೊಡುವುದರಿಂದ ಗರ್ಭಕೋಶವನ್ನು ಬಲಪಡಿಸುತ್ತದೆ. ಇದು ಗರ್ಭಕೋಶಕ್ಕೆ ರಕ್ತಸಂಚಾರ ಸರಿಯಾಗಿರಿಸಿ ಅದನ್ನು ಆರೋಗ್ಯಕರ ವಾಗಿರಿಸುತ್ತದೆ. ಅಲ್ಲದೆ ಬೆಳ್ಳಿಯು ಉತ್ತಮ ಸಂವಾಹಕ ವಾಗಿದ್ದು, ಅದು ಭೂಮಿಯಿಂದ ಪೋಲಾರ್ ಎನರ್ಜಿಯನ್ನೆಲ್ಲ ಸೆಳೆದು ದೇಹಕ್ಕೆ ಪಾಸ್ ಮಾಡುತ್ತದೆ.

### ಹಣೆಯ ಮೇಲೆ ತಿಲಕ ಧರಿಸುವುದು

ಎರಡು ಹಣೆಗಳ ನಡುವಿನ ಆ ಕೇಂದ್ರಬಿಂದುವನ್ನು ಬಹಳ ಹಿಂದಿನಿಂದಲೂ ಬಹಳ ಮುಖ್ಯವಾದ ನರಕೇಂದ್ರ ಎಂದು ನಂಬಲಾಗಿದೆ. ಇಲ್ಲಿ ಕುಂಕುಮ ಇಡುವುದರಿಂದ ದೇಹದಿಂದ ಎನರ್ಜಿ ಕಳೆದುಹೋಗದಂತೆ ನೋಡಿಕೊಳ್ಳ

ಬಹುದು. ಜೊತೆಗೆ ಏಕಾಗ್ರತೆ ಹೆಚ್ಚುತ್ತದೆ. ಹೀಗೆ ಕುಂಕುಮ ಇಡುವಾಗ ಆಜ್ಞಾಚಕ್ರಕ್ಕೆ ಪ್ರೆಸ್ ಆಗುವುದರಿಂದ ಮುಖಕ್ಕೆ ರಕ್ತ ಸಂಚಾರವೂ ಹೆಚ್ಚುತ್ತದೆ. ಹಿಂದೆಲ್ಲ ಗಂಡಸರು, ಹೆಂಗಸರು ಹಾಗೂ ಮಕ್ಕಳು ಎಲ್ಲರೂ ಹಣೆಗೆ ತಿಲಕ ಇಡುತ್ತಿದ್ದುದು ಇದೇ ಕಾರಣಕ್ಕೆ.

**ದೇವಸ್ಥಾನಗಳಲ್ಲಿ ಗಂಟೆ**

ಗರ್ಭಗುಡಿಯ ಬಳಿ ಹೋಗುವಾಗ ಗಂಟೆ ಬಡಿಯುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಗಂಟೆಯ ಶಬ್ದ ಕೆಟ್ಟ ಶಕ್ತಿಗಳನ್ನು ದೂರವಿರಿಸುತ್ತದೆ ಎಂಬ ನಂಬಿಕೆ ಇದೆಯಾದರೂ, ವೈಜ್ಞಾನಿಕವಾಗಿ, ಈ ಗಂಟೆ ಹೊಮ್ಮಿಸುವ ನಿನಾದ ಹಾಗೂ ಅದರ ಮೊಳಗುವಿಕೆ ಮನಸ್ಸಿನಿಂದ ಬೇರೆಲ್ಲ ಯೋಚನೆ ದೂರವಾಗಿಸಿ, ಏಕಾಗ್ರಚಿತ್ತ ನೀಡುತ್ತದೆ.

**ಯಾರನ್ನಾದರೂ ನೋಡಿದೊಡನೆ ನಮಸ್ಕರಿಸುವುದು**

ಹಿಂದೂ ಸಂಸ್ಕೃತಿಯಲ್ಲಿ ಜನರು ಮತ್ತೊಬ್ಬರನ್ನು ಭೇಟಿಯಾದ ಕೂಡಲೇ ಎರಡೂ ಕೈ ಜೋಡಿಸಿ ನಮಸ್ಕರಿಸುವುದು ಪದ್ಧತಿ. ಸಾಮಾನ್ಯವಾಗಿ ಹೀಗೆ ನಮಸ್ಕರಿಸುವುದು ಗೌರವಿಸುವ ಪ್ರತೀಕ ಎಂಬ ನಂಬಿಕೆಯಿದೆ. ಆದರೆ, ವೈಜ್ಞಾನಿಕವಾಗಿ ಹೇಳಬೇಕೆಂದರೆ ಹೀಗೆ ಕೈ ಜೋಡಿಸಿದಾಗ ಎರಡೂ ಕೈಗಳ ಎಲ್ಲ ಬೆರಳುಗಳೂ ಪ್ರೆಸ್ ಆಗುತ್ತವೆ. ಎಲ್ಲ ಬೆರಳುಗಳ ತುದಿಯಲ್ಲಿ ನರತಂತುಗಳಿವೆ. ಇವು ಕಣ್ಣು, ಕಿವಿ, ಮನಸ್ಸಿನ ಪ್ರೆಶರ್ ಪಾಯಿಂಟ್‌ಗಳು. ಈ ಪ್ರೆಶರ್ ಪಾಯಿಂಟ್ ಪ್ರೆಸ್ ಆಗುವುದರಿಂದ ಭೇಟಿಯಾದ ವ್ಯಕ್ತಿ ಬಹುಕಾಲ ನೆನಪಿನಲ್ಲಿ ಉಳಿವ ಜೊತೆಗೆ ಅವರ ಬಳಿ ಮಾತನಾಡುವಾಗ ಮನಸ್ಸು ಚಂಚಲವಾಗುವುದಿಲ್ಲ ಎಂಬುದು ಕಾರಣ. ಇದರೊಂದಿಗೆ ಶೇಕ್ ಹ್ಯಾಂಡ್ ಮಾಡಿದಾಗ ಬ್ಯಾಕ್ಟೀರಿಯಾಗಳು ಒಬ್ಬರಿಂದೊಬ್ಬರಿಗೆ ಹರಡಬಹುದು. ನಮಸ್ಕಾರದಲ್ಲಿ ಆ ಭಯವೂ ಇಲ್ಲ, ಇದು ಸಂಪೂರ್ಣ ಸ್ವಚ್ಛ ಹಾಗೂ ಸುರಕ್ಷಿತ.

**ಸೂರ್ಯ ನಮಸ್ಕಾರ**

ಹಿಂದೂಗಳು ಬೆಳಗ್ಗೆ ಹಾಗೂ ಸಂಜೆಯ ಹೊತ್ತಿನಲ್ಲಿ ಸೂರ್ಯ ನಮಸ್ಕಾರ ಹಾಗೂ ಸಂಧ್ಯಾವಂದನೆ ಆಚರಿಸಿಕೊಂಡು ಬರುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ ಬೆಳಗಿನ ಹಾಗೂ ಸಂಜೆಯ ಬಿಸಿಲು ಮನುಷ್ಯನ ದೇಹಕ್ಕೆ ಅತ್ಯಗತ್ಯ. ಇದು ವಿಟಮಿನ್ ಡಿ ನೀಡುವ ಜೊತೆಗೆ ದೇಹವನ್ನು ಚೇತೋಹಾರಿಯಾಗಿಸುತ್ತದೆ. ಇದರೊಂದಿಗೆ ಬೆಳಗ್ಗೆ ಬೇಗ ಏಳುವುದು ಅಭ್ಯಾಸವೂ ಆಗುತ್ತದೆ.ಹೀಗೆ ಹಿಂದೂಧರ್ಮದ ಆಚರಣೆಗಳು ವೈಜ್ಞಾನಿಕ ತಳಹದಿಯ ಮೇಲೆಯೆ ರೂಪಿಸಲ್ಪಟ್ಟಿವೆ. ಹಿಂದೂ ಧರ್ಮವು ಮೂಢನಂಬಿಕೆಗಳನ್ನು ಹರಡುತ್ತದೆ ಎಂದು ಹಲವಾರು ಬಾರಿ ವಿಮರ್ಶೆಗೆ ಒಳಪಟ್ಟಿದೆ. ಆದರೆ ಇದು ಸತ್ಯಕ್ಕೆ ದೂರವಾದ ಮಾತು. ಹಿಂದೂ ಧರ್ಮವು ವಿಶ್ವದಲ್ಲಿಯೇ ಅತ್ಯಂತ ವೈಜ್ಞಾನಿಕನಾಗಿ ರೂಪಿಸಲ್ಪಟ್ಟ ಧರ್ಮವಾಗಿದೆ. ಇದರಲ್ಲಿ ಆಚರಿಸಲ್ಪಡುವ ಆಚರಣೆಗಳು ಮತ್ತು ಸಂಪ್ರದಾಯಗಳು ತಮ್ಮ ಹಿಂದೆ ಒಂದು ಕುತೂಹಲಕಾರಿಯಾದ ಕಾರಣಗಳನ್ನು ಹೊಂದಿರುತ್ತವೆ. ಇದರಲ್ಲಿ ಪ್ರತಿಯೊಂದು ವಿಷಯವು ಅತ್ಯಂತ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸುವಲ್ಲಿ ಇದು ತನ್ನ ಕಾಣಿಕೆಯನ್ನು ಸಲ್ಲಿಸುತ್ತದೆ.

**–ವಿಜಯ್ ಕುಮಾರ್**

ಅಭಿನವ ಭಾರತಿ ಕಾಲೇಜ್ ಆಫ್ ಫಾರ್ಮಸಿ

# ಮಂಡ್ಯ ಜಿಲ್ಲೆಯ ಆರ್ಥಿಕ ಪ್ರಗತಿಗೆ ಮುನ್ನುಡಿ ಬರೆದ....

*...2ನೇ ಪುಟದಿಂದ*

ಕೈಗಾರಿಕೆಗಳು, ಹೀಗೆ ತಮ್ಮದೇ ಆದ ಸ್ವಂತ ವ್ಯವಹಾರ ಮಾಡಿಕೊಂಡು ಆರ್ಥಿಕವಾಗಿ ಸಬಲೀಕರಣ ಗೊಳ್ಳುವುದರ ಜೊತೆಗೆ ಸಂಸ್ಥೆಯ ಜೊತೆ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡು ಸಂಸ್ಥೆಯ ಬೆಳವಣಿಗೆಗೂ ಕಾರಣ ಕರ್ತರಾಗಿದ್ದಾರೆ.ಇತರೆ ಸರ್ಕಾರಿ ಹಾಗೂ ಖಾಸಗಿ ಬ್ಯಾಂಕುಗಳು ಈ ನಿಟ್ಟಿನಲ್ಲಿ ವಿಫಲವಾಗಿರು ವುದನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಫಲತೆಯನ್ನು ಸಾಧಿಸಿ ತೋರಿಸಿದೆ.

ಈ ಎಲ್ಲಾ ಬೆಳವಣಿಗೆಗಳಿಗೂ ಕಾರಣ ಕರ್ತರಾದ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ.ಡಿ ವೀರೇಂದ್ರ ಹೆಗ್ಗಡೆ ಯವರಿಗೂ ಹಾಗೂ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೂ ನನ್ನ ಅನಂತ ಅನಂತ ಧನ್ಯವಾದಗಳು. ಜೊತೆಗೆ ಅವಶ್ಯಕತೆಗನುಗುಣವಾಗಿ ಸಾಲಪಡೆದು ಸಕಾಲದಲ್ಲಿ ಮರುಪಾವತಿ ಮಾಡಿ ಜಿಲ್ಲೆಯ ಸ್ವಾಭಿಮಾನದ ಕೀರ್ತಿಯನ್ನು ಹೆಚ್ಚಿಸಿದ ಎಲ್ಲಾ ಸ್ವ ಸಹಾಯ ಸಂಘಗಳ ಸದಸ್ಯರಿಗೆ ನನ್ನ ತುಂಬು ಹೃದಯದ ಧನ್ಯವಾದಗಳು.★

# ಕ್ಯಾರಲಿ : ಸೋಲು ಒಪ್ಪದ ಯೋಧ

ಈ ಕಥೆಯು 1938ನೇ ವರ್ಷದಲ್ಲಿ ನಡೆದಂತಹ ಕ್ಯಾರಲಿ ಎಂಬ ಓರ್ವ ಹಂಗೇರಿಯ ದೇಶದ ಯೋಧನ ಕಥೆ. ಕ್ಯಾರಲಿಯು ಆ ದೇಶದ ಉತ್ತಮವಾದ ಪಿಸ್ತೂಲ್ ಶೂಟರ್ ಆಗಿರುತ್ತಾನೆ. ಆ ದೇಶದಲ್ಲಿ ಅದೆಷ್ಟೋ ರಾಷ್ಟ್ರೀಯ ಚಾಂಪಿಯನ್ ಶಿಪ್ ಸ್ಪರ್ಧೆಗಳಲ್ಲಿ ವಿಜೇತನಾಗಿರುತ್ತಾನೆ. ಎಲ್ಲರಿಗೂ ಸಹ 1940ರಲ್ಲಿ ನಡೆಯುವ ಒಲಂಪಿಕ್ಸ್ ಪಿಸ್ತೂಲ್ ಶೂಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ವಿಜಯವು ಕ್ಯಾರಲಿಯದೆ ಎಂದು ಖಚಿತವಾಗಿತ್ತು. ಅವನು ಬಹಳ ವರ್ಷಗಳ ಕಾಲ ತರಬೇತಿಯನ್ನು ಪಡೆದಿರುತ್ತಾನೆ. ಅವನಿಗೆ ಅವನ ಬಲಗೈಯನ್ನು ಈ ತರಬೇತಿಯಿಂದ ಪ್ರಪಂಚದ ಅತ್ಯುತ್ತಮವಾದ ಶೂಟಿಂಗ್ ಕೈ ಆಗಿಸಿಕೊಳ್ಳಬೇಕೆಂಬ ಬಲವಾದ ಬಯಕೆಯಾಗಿತ್ತು. ಈ ಪ್ರಕ್ರಿಯೆಯಲ್ಲಿ ಅವನು ಯಶಸ್ಸನ್ನು ಗಳಿಸಿದನು. ಅವನು ಕೇವಲ ಎರಡು ವರ್ಷಗಳ ಕಾಲದಲ್ಲಿ ಅವನು ತನ್ನ ಕೈಯನ್ನು ಅತ್ಯುತ್ತಮವಾದ ಶೂಟಿಂಗ್ ಕೈ ಆಗಿಸಿಕೊಂಡಿದ್ದನು. 1938ರಲ್ಲಿ ಒಂದು ಸಿಪಾಯಿಗಳ ಶಿಬಿರ ನಡೆಯುತ್ತಿತ್ತು. ಆ ಶಿಬಿರದಲ್ಲಿ ಅವನು ಯಾವ ಕೈಯಿಂದ ಚಿನ್ನದ ಪದಕವನ್ನು ಗೆಲ್ಲಬೇಕಿತ್ತೋ ಆ ಕೈಯಲ್ಲಿ ಒಂದು ಬಾಂಬ್ ಸ್ಫೋಟಿಸಿ ಅವನ ಬಲಗೈಯು ತೀವ್ರವಾಗಿ ಘಾಯಗೊಂಡಿದ್ದರಿಂದ ಸಂಪೂರ್ಣವಾಗಿ ಅದನ್ನು ಬಲಗೈಯನ್ನು ಸಂಪೂಣವಾಗಿ ಶಸ್ತ್ರಚಿಕಿತ್ಸೆಯಿಂದ ತೆಗೆದು ಹಾಕಲಾಯಿತು.

ಈಗ ಅವನ ಬಳಿ ಎರಡು ಆಯ್ಕೆಗಳಿದ್ದವು. ಒಂದು ಅವನು ಜೀವನಪರಿ ಎಲ್ಲಾದರು ಅವಿತು ಕುಳಿತು ಅಳುವುದು, ಅಥವಾ ಎರಡನೆಯದು ಅವನಿಗೆ ಯಾವ ಗುರಿಯಿತ್ತೊ ಅದನ್ನು ಹೇಗಾದರು ಸಾಧಿಸುವುದು. ಕ್ಯಾರಲಿಯು ಎರಡನೆಯ ಮಾರ್ಗವನ್ನು ಆಯ್ಕೆ ಮಾಡಿಕೊಂಡನು. ಒಂದು ತಿಂಗಳ ಕಾಲ ಅವನಿಗೆ ಚಿಕಿತ್ಸೆ ನಡೆಯಿತು. ನಂತರ ಅವನು ಎದ್ದು ಅವನ ಗುರಿ ಮುಟ್ಟಲು ಪ್ರಯತ್ನ ಪುನರ್ ಪ್ರಾರಂಬಭಿಸಿದನು. ಯಾವ ಕೈಯಿಂದ ಅವನಿಗೆ ಬರೆಯಲು ಸಹ ಸಾಧ್ಯವಾಗುತ್ತಿರಲಿಲ್ಲವೋ ಆ ಕೈಯನ್ನು ಒಂದು ವರ್ಷದ ಶ್ರಮ ಹಾಗೂ ತರಬೇತಿಯ ನಂತರ ಪ್ರಪಂಚದ ಅತ್ಯುತ್ತಮವಾದ ಶೊಟಿಂಗ್ ಕೈಯಾಗಿಸಿಕೊಂಡನು. ಹಂಗೇರಿಯಲ್ಲಿ ರಾಷ್ಟ್ರೀಯ ಚಾಂಪಿಯನ್‌ಶಿಪ್ ನಡೆಯುತ್ತಿತ್ತು. ಅಲ್ಲಿ ಅವನು ಎಲ್ಲರಲ್ಲಿಯೂ ಅಚ್ಚರಿ ಮಾಡಿಸಿ ಬಹಳ ಸುಲಭವಾಗಿ ಯಶಸ್ಸನ್ನು ಪಡೆದನು. ಆದರೆ, ಅವನು ಇಲ್ಲಿಗೆ ನಿಲ್ಲಲಿಲ್ಲ. ಏಕೆಂದರೆ ಅವನ ಗುರಿಯು ಪ್ರಪಂಚದ ಅತ್ಯುತ್ತಮವಾದ ಶೂಟಿಂಗ್ ಕೈಯಾಗಿ ಗುರುತಿಸಿಕೊಳ್ಳುವುದಾಗಿತ್ತು. ಅವನು ಅವನ ಸಂಪೂರ್ಣ ಗಮನವನ್ನು 1940 ರ ಒಲಂಪಿಕ್ಸ್ ಕಡೆಗೆ ಹರಿಸಿದನು. ಆದರೆ, 1940ರ ಒಲಂಪಿಕ್ಸ್ ಅನ್ನು ಒಂದನೇ ಪ್ರಪಂಚದ ಯುದ್ಧದಿಂದಾಗಿ ರದ್ದುಗೊಳಿಸಲಾಯಿತು. ಆನಂತರ ಕ್ಯಾರಲಿಯು 1944ರಲ್ಲಿ ನಡೆಯಲಿದ್ದ ಒಲಂಪಿಕ್ಸ್ ಕಡೆಗೆ ಗಮನ ಹರಿಸಿದನು, ಆದರೆ, 1944ರಲ್ಲಿ ನಡೆಯಬೇಕಿದ್ದ ಒಲಂಪಿಕ್ಸ್ ಕೂಡ, ಎರಡನೇ ಪ್ರಪಂಚದ ಯುದ್ಧದಿಂದಾಗಿ ರದ್ದುಗೊಂಡಿತು.

ಆನಂತರ ಮತ್ತೆ ಕ್ಯಾರಲಿಯು 1948ರಲ್ಲಿ ನಡೆಯಲಿದ್ದ ಒಲಂಪಿಕ್ಸ್ ಕಡೆಗೆ ಗಮನ ಹರಿಸಿದನು. 1938ರಲ್ಲಿ ಅವನಿಗೆ 28 ವರ್ಷ ಗಳಾಗಿತ್ತು. ಆದರೆ, 1948ರಲ್ಲಿ ಅವನ ವಯಸ್ಸು 38 ವರ್ಷಗಳಾಗಿತ್ತು. ಆದ್ದರಿಂದ ಅವನಿಗೆ ಕಿರಿಯ ಆಟಗಾರರ ನಡುವೆ ಸ್ಪರ್ಧಿಸುವುದು ಕಷ್ಟವಾಗಿತ್ತು. ಆದರೆ, ಕ್ಯಾರಲಿಯು ಇಂತಹ ಕಾರಣಗಳಿಗೆ ಯಾವುದಕ್ಕೂ ತಲೆ ಬಾಗಿಸದೆ, ಸ್ಪರ್ಧಿಸಿ 1948ರ ಒಲಂಪಿಕ್ಸ್‌ನ ಯಶಸ್ಸನ್ನು ಗಳಿಸಿದನು.

ಇಷ್ಟಕ್ಕೆ ತೃಪ್ತನಾಗಲಿಲ್ಲ ಕ್ಯಾಲರಿ ಮತ್ತೆ ನಾಲ್ಕು ವರ್ಷದ ಬಳಿಕ 1952ರಲ್ಲಿ ನಡೆದ ಒಲಂಪಿಕ್ಸ್‌ನಲ್ಲಿಯು ಸಹ ಭಾಗವಹಿಸಿ ಯಶಸ್ವಿಯಾದನು.

ಈ ರೀತಿ ಪೂರ್ತಿ ಒಲಂಪಿಕ್ಸ್ ಕಥೆಯನ್ನೇ ಬದಲಾಯಿಸಿ ಬಿಟ್ಟನು ಕ್ಯಾರಲಿಯು. ಇದಕ್ಕಿಂತ ಮೊದಲು ಯಾರು ಸಹ ಒಲಂಪಿಕ್ಸ್‌ನಲ್ಲಿ ಎರಡು ಬಾರಿ ಚಿನ್ನದ ಪದಕವನ್ನು ಗೆದ್ದವರೆ ಇಲ್ಲ. ಕ್ಯಾರಲಿಯೇ ಮೊದಲಾಗಿ ದಖಲೆ ನಿರ್ಮಿಸಿದನು.

ಹೀಗೆ ನಾವು ನಮ್ಮ ಗುರಿ ಮುಟ್ಟಲು ಅಡ್ಡಿಯಾಗಿ ಸಾವಿರ ಕಾರಣಗಳಿರಬಹುದು. ಆದರೆ, ನಾವು ಅವುಗಳನ್ನು ಹಿಮ್ಮೆಟ್ಟಿಸಿ ನಮ್ಮ ಗುರಿಯನ್ನು ತಲುಪಲು ಪ್ರತಿದಿನ, ಪ್ರತಿ ಕ್ಷಣವು ಪ್ರಯತ್ನ ಮಾಡಬೇಕು. ಹಾಗೂ ಸತತ ಪ್ರಯತ್ನಿಸುವವರಿಗೆ ಕೊನೆಯಲ್ಲಿ ದೊರೆಯುವುದು ಯಶಸ್ಸು ಎಂಬುದಕ್ಕೆ ಕ್ಯಾರಲಿಯ ಯಶೋಗಾಥೆ ನಿದರ್ಶನವಾಗಿದೆ.

**–ರಿಶಿಕ್.ಅರ್**

ದ್ವಿತಿಯ ಪಿಯುಸಿ ವಿದ್ಯಾರ್ಥಿ, (ವಿಜ್ಞಾನ ವಿಭಾಗ)

## ಹಣದ ಮುಂದೆ ಎಲ್ಲವೂ ಗೌಣ

ಇಂದಿನ ಜಗತ್ತು ಹಣದ ಹಿಂದೆ ಓಡುತ್ತಿದೆಯೋ ಇಲ್ಲ ಜನರೇ ಹಣದ ಹಿಂದೆ ಓಡುತ್ತಿರುವರೋ ಗೊತ್ತಿಲ್ಲ. ಎಷ್ಟು ಹತ್ತಿರದ ಸಂಭಂದವೇ ಆಗಲಿ ಸ್ನೇಹಿತರೇ ಆಗಲಿ ನಮ್ಮಿಂದ ದೂರಾಗುವುದು ಇದೇ ಹಣದಿಂದ, ಮೊನ್ನೆವರೆಗೂ ಚೆನ್ನಾಗಿ ಮಾತಾಡುತ್ತಿದ್ದ ಸ್ನೇಹಿತರು ತುಂಬಾ ಹತ್ತಿರದ ಸ್ನೇಹಿತರು ನನಗೆ ಸ್ವಲ್ಪ ಹಣ ಬೇಕಾಗಿದೆ ಸಾಲ ಕೊಡಿ ಸ್ವಲ್ಪ ದಿನದಲ್ಲೇ ವಾಪಸ್ಸು ಕೊಡುತ್ತೇನೆ ಎಂದು ಕೇಳಿದಾಗ ಕೊಡುತ್ತೇನೆ ಇರು ಎಂದು ಹೇಳಿದವರು ಈಗ ಫೋನ್ ಮಾಡಿದರೆ ಕರೆಯನ್ನು ಸ್ವೀಕರಿಸುತ್ತಲೇ ಇಲ್ಲ. ಇಲ್ಲಿ ನನಗೆ ಬೇಸರವಾಗಿದ್ದು ಅವರು ನನಗೆ ದುಡ್ಡು ಕೊಡದಿದ್ದಕ್ಕೆ ಅಲ್ಲ ಅವರು ನನ್ನ ಕರೆಯನ್ನು ಸ್ವೀಕರಿಸದೆ ಇರುವುದಕ್ಕೆ. ಅವರು ನನ್ನ ಫೋನ್ ಕರೆ ಸ್ವೀಕರಿಸಿ ಇಲ್ಲ ಗೆಳೆಯ ದುಡ್ಡು ಒದಗಲಿಲ್ಲ ಕ್ಷಮಿಸು ನನಗೆ ಕೊಡಲು ಆಗುತ್ತಿಲ್ಲ ಎಂದು ಒಂದು ಮಾತು ಹೇಳಿದ್ದರೆ ಸಾಕಿತ್ತು, ನಾನೇನು ಅವರಿಗೆ ಕೊಟ್ಟು ಮಡಗಿದ್ದನೆ ಇಲ್ಲ. ಹಾಗಾದರೆ ಅವರು ಇಷ್ಟು ದಿನ ನನ್ನೊಂದಿಗೆ ಇದ್ದಿದ್ದು, ಮಾತಾಡುತ್ತಿದ್ದದ್ದು ಸುಳ್ಳೇ? (ಹಾಗೆಂದ ಮಾತ್ರಕ್ಕೆ ಎಲ್ಲಾ ಸ್ನೇಹಿತರು ಹೀಗೆಯೇ ಇರುತ್ತಾರೆ ಎಂದು ನಾನು ಹೇಳುವುದಿಲ್ಲ)

ಇದು ನನ್ನ ಸ್ವ ಅನುಭವ ಇಲ್ಲಿ ನಾನು ಹೇಳಲು ಹೊರಟಿರುವುದು ಇಷ್ಟೇ ಕಷ್ಟಕ್ಕೆ ಆಗದ ನೂರು ಜನ ಸ್ನೇಹಿತರ ಗೆಳೆತನ ಮಾಡುವುದಕ್ಕಿಂತ ಕಷ್ಟಕ್ಕೆ ಆಗುವ ಹತ್ತೇ ಹತ್ತು ಜನರ ಗೆಳೆತನ ಮಾಡುವುದು ಲೇಸು ಎಂದೆನಿಸಿತು ಇದು ನನ್ನ ಸ್ವ ಅನುಭವವಷ್ಟೇ ಬರೆಯಬೇಕು ಎನಿಸಿತು ಬರೆದೆ ಅಷ್ಟೇ.

**–ಬಿ.ಎಸ್. ಶರತ್ ಕುಮಾರ್,**

ಶಿಕ್ಷಕರು, ಅಭಿನವ ಭಾರತಿ, ಪ್ರೌಢ ಶಾಲೆ, ಮಂಡ್ಯ

## ಅಹಂಕಾರದ ಬಗ್ಗೆ ಶ್ರೀ ಶಂಕರಾಚಾರ್ಯರ ನೀತಿ ಪಾಠ

ಅಹಂಕಾರ ಅಳಿಯದ ಹೊರತು ವ್ಯಕ್ತಿತ್ವ ವಿಕಸನ ಸಾಧ್ಯವಿಲ್ಲ. 'ನಾ', 'ನಾನು', 'ನಾನೇ', 'ನನ್ನ', 'ನನಗೆ', 'ನನ್ನನ್ನು', 'ನನ್ನಿಂದ' ಎನ್ನುವ ಪದಗಳು ಕೇವಲ ಅಹಂಕಾರ ಸೂಚಕ ವಾಗಿವೆ. ನಮ್ಮ ಎಲ್ಲ ಬಯಕೆಗಳೂ ಆ ಅಹಂಕಾರವನ್ನು ತಣಿಸಿಕೊಳ್ಳುವುದಕ್ಕಾಗಿಯೇ ಇರುತ್ತವೆ. ಎಲ್ಲಿಯ ತನಕ ನಮ್ಮನ್ನು ನಾವು ಈ ಜಗತ್ತಿನಲ್ಲಿರುವ ವಸ್ತು, ವಿಷಯ ಮತ್ತು ವ್ಯಕ್ತಿಗಳೊಂದಿಗೆ ಗುರುತಿಸಿ ಕೊಳ್ಳು ತ್ತೇವೆಯೋ, ಅಲ್ಲಿಯ ತನಕ ಅಹಂಕಾರ ಹೋಗುವುದೇ ಇಲ್ಲ.

### ಶಂಕರಾಚಾರ್ಯರ ನೀತಿ ಪಾಠ :



ಒಮ್ಮೆ ಶಂಕರಾಚಾರ್ಯರು ಅವರ ಶಿಷ್ಯರ ಜೊತೆಗೆ ಹಿಮಾಲಯದತ್ತ ಯಾತ್ರೆ ಮಾಡುತ್ತಿದ್ದರು. ಮುಂದೆ ನಡೆಯುತ್ತಾ ಅಲಕನಂದಾ ನದಿಯ ತೀರಕ್ಕೆ ಅವರೆಲ್ಲರೂ ಬಂದು ಸೇರಿದರು. ಆಗ ಒಬ್ಬ ಶಿಷ್ಯನು ಅವರ ಸ್ತುತಿ ಮಾಡುತ್ತ 'ಆಚಾರ್ಯರೆ, ನಿಮ್ಮ ಜ್ಞಾನವು ಎಷ್ಟು ಅಗಾಧವಾಗಿದೆ! ನಮ್ಮ ಮುಂದೆ ಪವಿತ್ರ ಅಲಕನಂದಾ ನದಿಯು ಹರಿಯುತ್ತಿದೆ. ನಿಮ್ಮ ಜ್ಞಾನವು ಈ ಅಲಕನಂದಾ ನದಿಯ ಪ್ರವಾಹಕ್ಕಿಂತಲೂ ಎಷ್ಟೋ ಪಟ್ಟು ದೊಡ್ಡದಾಗಿರುವ ಆ ಮಹಾಸಾಗರದಂತೆ ಭಾಸವಾಗುತ್ತದೆ'.

ಆಗ ಶಂಕರಾಚಾರ್ಯರು ಕೈಯಲ್ಲಿರುವ ದಂಡವನ್ನು ನೀರಿನಲ್ಲಿ ಮುಳುಗಿಸಿ ಹೊರತೆಗೆದರು. ಶಿಷ್ಯರಿಗೆ ತೋರಿಸಿ ಹೀಗೆ ಹೇಳಿದರು, 'ನೋಡು, ಈ ದಂಡವನ್ನು ಆ ಪವಿತ್ರ ನದಿಯಲ್ಲಿ ಅದ್ದಿ ತೆಗೆದಿದ್ದೇನೆ. ಆದರೆ ಇದಕ್ಕೆ ಒಂದೇ ಒಂದು ಹನಿ ನೀರು ಮಾತ್ರ ಅಂಟಿಕೊಂಡಿದೆ ಅಲ್ಲವೇ!' ನಗುತ್ತಲೇ ಶಂಕರಾಚಾರ್ಯರು ಮುಂದುವರಿಸಿದರು. 'ಅರೆ ಹುಚ್ಚ, ನನ್ನ ಜ್ಞಾನದ ಪರಿಮಿತಿ ಏನು ಗೊತ್ತೇ? ಅಲಕನಂದೆಯಲ್ಲಿ ಎಷ್ಟೊಂದು ನೀರಿದೆ! ಆದರೆ ಅದಷ್ಟೂ ನೀರಿನಲ್ಲಿ ಈ ದಂಡವನ್ನು ಅಂಟಿಕೊಂಡಿದ್ದು ಕೇವಲ ಒಂದು ಬಿಂದು! ಅಂತೆಯೇ ಸಮಸ್ತ ಬ್ರಹ್ಮಾಂಡದಲ್ಲಿರುವ ಜ್ಞಾನಸಾಗರದಲ್ಲಿ ನನ್ನಲ್ಲಿರುವ ಕೇವಲ ಒಂದು ಬಿಂದು ಜ್ಞಾನವಷ್ಟೆ.

ಮಿತ್ರರೇ, ಆದಿ ಶಂಕರಾಚಾರ್ಯರೇ ತಮ್ಮಲ್ಲಿರುವ ಅಗಾಧ ಜ್ಞಾನದ ಬಗ್ಗೆ ಹೀಗೆ ಹೇಳಿರಬೇಕಾದರೆ, ನಾವು ನೀವು ಏನು ಹೇಳುವುದು?

ಇದರ ತಾತ್ಪರ್ಯ:

**ಯಾವುದೇ ವಿಷಯದ ಬಗ್ಗೆ ಅಹಂಕಾರ ಬೇಡ**

**– ಸಂಗ್ರಹ**